# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 139 Issue: 139 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 01.12.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2




BOOK YOUR ADVERTISEMENTS TO REACH MORE READERS
1,00,000+ Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper

ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು
ಪುಟ: 3ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com


## ಮೈಕ್ರೋ ನ್ಯೂಸ್

### ನಾವೆಲ್ಲರೂ ಮಾತೃ ಭಾಷೆಯಲ್ಲಿ ಮಾತನಾಡಬೇಕು : ಬಸವರಾಜ ರಾಯರೆಡ್ಡಿ




**ಹಂಪಿ ಟೈಮ್ಸ್ ಕೊಪ್ಪಳ**
ನಮ್ಮ ಭಾಷೆ ಸಂಸ್ಕೃತಿ ಮರೆತು ಯೂರೋಪಿಯನ್ ಭಾಷೆ ಮಾತನಾಡುವುದು ತಪ್ಪು. ನಮ್ಮ ಮಾತೃಭಾಷೆ ಕನ್ನಡದಲ್ಲಿ ನಾವೆಲ್ಲರೂ ಮಾತನಾಡಬೇಕು. ನಮ್ಮ ಪಕ್ಕದ ತಮಿಳು ಸಂಸ್ಕೃತಿ ನೋಡಿ ಅವರು ಹೇಗೆ ತಮ್ಮ ಭಾಷೆಯಲ್ಲಿ ಮಾತನಾಡುತ್ತಾರೆ ಎಂದು ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಹೇಳಿದರು.

ಅವರು ಶನಿವಾರ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಕೊಪ್ಪಳ ವಿಶ್ವವಿದ್ಯಾಲಯದ ಕರ್ನಾಟಕ ಸುವರ್ಣ ಸಂಭ್ರಮ ಕನ್ನಡ ರಾಜೋತ್ಸವ ಹಾಗೂ ಕನ್ನಡ ಸಂಘ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ಮಾತನಾಡಿದರು.

ಇತ್ತಿಚೆಗೆ ನಮ್ಮಲ್ಲಿ ಕನ್ನಡ ಭಾಷೆ ಮಾತನಾಡಿದರೆ ನಮಗೆ ಗೌರವ ಸಿಗಲ್ಲ. ಇಂಗ್ಲಿಷನಲ್ಲಿ ಮಾತನಾಡಿದರೆ ಗೌರವ ಹೆಚ್ಚುತ್ತದೆ ಎನ್ನುವ ಮಾನಸಿಕ ರೋಗದ ಗೀಳು ನಮಗೆ ಬಂದಿದೆ. >>4


ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು
ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125


# ವಿಜಯನಗರ ಕಾಲುವೆಗಳಿಗೆ ನಿಗದಿಯಂತೆ ನೀರು ಬಿಡುಗಡೆ

## ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷ ಶಿವರಾಜ ಎಸ್.ತಂಗಡಗಿ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**
ಪ್ರಸ್ತಕ ಸಾಲಿನ 122ನೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ಹಿಂಗಾರು ಹಂಗಾಮಿಗೆ ಜಲಾಶಯದಲ್ಲಿ ಲಭ್ಯವಾಗುವ ನೀರಿನ ಪ್ರಮಾಣವನ್ನು ಅಂದಾಜಿಸಿ ಕಾಲುವೆಗಳಿಗೆ ನೀರು ಹರಿಸಲು ನಿರ್ಧರಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವರುಮ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷ ಶಿವರಾಜ ಎಸ್.ತಂಗಡಗಿ ತಿಳಿಸಿದ್ದಾರೆ.



ತುಂಗಭದ್ರಾ ಜಲಾಶಯದಲ್ಲಿ ಹಿಂಗಾರು ಹಂಗಾಮಿಗೆ ಲಭ್ಯವಿರುವ ನೀರನ್ನು ಮಿತವ್ಯಯವಾಗಿ ಬಳಸಿ ಅಧಿಕೃತ ಅಚ್ಚುಕಟ್ಟು ಪ್ರದೇಶದಲ್ಲಿ ನಿಗಧಿತ ಬೆಳೆಗಳನ್ನು ಮಾತ್ರ ಬೆಳೆಯಲು ಹಾಗೂ ಸಮರ್ಪಕ ನೀರು ನಿರ್ವಹಣೆಗೆ ರೈತರು ಇಲಾಖೆಯೊಡನೆ ಸಹಕರಿಸಬೇಕು.

ರೈತರು ಅನಧೀಕೃತವಾಗಿ ನೀರು ಪಡೆದು ಭತ್ತ ಹಾಗೂ ಇತರೆ ಬೆಳೆಗಳನ್ನು ಬೆಳೆದಲ್ಲಿ ನೀರಾವರಿ ಕಾಯ್ದೆಯನ್ವಯ ಕಾನೂನು ಕ್ರಮ ಜರುಗಿಸಲಾಗುವುದು, ರೈತರು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಕನೀನಿನಿ ಅಧೀಕ್ಷಕ ಅಭಿಯಂತರರಾದ ಎಲ್.ಬಸವರಾಜ್ ತಿಳಿಸಿದ್ದಾರೆ. >>4

# ಪರಿಹಾರ ವಿಳಂಬ: ಕೊಪ್ಪಳ ಘಟಕದ ಸರಕಾರಿ ಬಸ್ ಜಪ್ತಿ




**ಹಂಪಿ ಟೈಮ್ಸ್ ಕೂಡ್ಲಿಗಿ**
ಕೋರ್ಟ್ ಆದೇಶದನ್ವಯ ಕೆಕೆಆರ್‌ಟಿಸಿ ಕೊಪ್ಪಳ ವಿಭಾಗದವರು ಮೃತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡದೆ ಇರುವ ಕಾರಣಕ್ಕೆ ಬುಧುವಾರ ಕೊಪ್ಪಳ ವಿಭಾಗಕ್ಕೆ ಸೇರಿದ ಕೊಪ್ಪಳದಿಂದ ಬೆಂಗಳೂರಿಗೆ ತೆರಳುತ್ತಿದ್ದ ಸಾರಿಗೆ ಬಸ್‌ನ್ನು ಜಪ್ತಿ ಮಾಡಿರುವ ಘಟನೆ ಕೂಡ್ಲಿಗಿ ಬಸ್ ನಿಲ್ದಾಣದಲ್ಲಿ ನಡೆದಿದೆ. ಈ ಹಿಂದೆ ಶಿವಪುರ ಗ್ರಾಮದಲ್ಲಿ ಕೊಪ್ಪಳ ವಿಭಾಗಕ್ಕೆ ಸೇರಿದ ಸಾರಿಗೆ ಬಸ್ ಡಿಕ್ಕಿಯಾದ ಪರಿಣಾಮ ಕ್ಯಾಸನಕೆರೆ ಗ್ರಾಮದ ನಿವಾಸಿ ಜಿ. ಪ್ರಕಾಶ್ ಎನ್ನುವ ವ್ಯಕ್ತಿ ಮೃತಪಟ್ಟಿದ್ದರು. ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೃತರ ಪತ್ನಿ ಅನುಸೂಯಮ್ಮ ದೂರು ನೀಡಿ, ಪರಿಹಾರ ಕೋರಿ ಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಕೂಡ್ಲಿಗಿ ಹಿರಿಯ ಸಿವಿಲ್ ನ್ಯಾಯಾಲಯ, ಮೃತರ ಕುಟುಂಬಕ್ಕೆ ಕೆಕೆಆರ್ ಟಿಸಿ ಕೊಪ್ಪಳ ವಿಭಾಗದವರು 33,76,859 ರೂಪಾಯಿ ಪರಿಹಾರ ನೀಡಬೇಕು ಎಂದು ಆದೇಶ ಹೊರಡಿಸಿತ್ತು. ಸಾರಿಗೆ ಇಲಾಖೆಯವರು ಪರಿಹಾರ ನೀಡಲು ನಿರ್ಲಕ್ಷ್ಯ ಮಾಡಿದ ಹಿನ್ನೆಲೆಯಲ್ಲಿ ನ್ಯಾಯಾಲಯದ ಬೇಲೀಫ್ ಎಚ್. ಮಹೇಶ್ ನಾಯ್ಕ ಹಾಗೂ ಸಿಬ್ಬಂದಿಯವರು ಮತ್ತು ವಕೀಲ ಮಲ್ಲಪ್ಪ ಅರಳಿ ಬಸ್ ನಿಲ್ದಾಣಕ್ಕೆ ಆಗಮಿಸಿ ಸಾರಿಗೆ ಬಸ್ ಜಪ್ತಿ ಮಾಡಿದ್ದಾರೆ.

# ವಿದ್ಯಾರ್ಥಿಗಳಿಗೆ ಪಾಠದಷ್ಟೇ ಆಟಗಳು ಮುಖ್ಯ

## ವೈದ್ಯ ಬಿ.ಜಿ.ಆಚಾರ್ ಹೇಳಿಕೆ | ಆಟದಲ್ಲಿ ಎದುರಾಳಿಯನ್ನು ಪ್ರೀತಿಸಿ | ಎಸ್‌ಜಿಆರ್‌ಎಸ್ ವಾರ್ಷಿಕ ಕ್ರೀಡಾಕೂಟ

**ಹಂಪಿ ಟೈಮ್ಸ್ ಹೊಸಪೇಟೆ**
ಆಟಗಳು ಪ್ರತಿಯೊಬ್ಬರಿಗೂ ಮನರಂಜನೆಯ ಜೊತೆಗೆ ದೈಹಿಕ ಶಕ್ತಿಯನ್ನು ನೀಡುತ್ತವೆ. ಆಟದಲ್ಲಿ ಎದುರಾಳಿಯನ್ನು ಪ್ರೀತಿಯಿಂದ ಕಾಣಬೇಕು. ಆಟ ಗೆದ್ದಾದ ಮೇಲೆ ಎದುರಾಳಿಯ ದೌರ್ಬಲ್ಯವನ್ನು ಅವರಿಗೆ ತಿಳಿಸಬೇಕು. ಇದು ಒಬ್ಬ ನಿಜವಾದ ಆಟಗಾರನ ಗುಣ ಎಂದು ನಗರದ ಖ್ಯಾತ ವೈದ್ಯ ಬಿ.ಜಿ.ಆಚಾರ್ ತಿಳಿಸಿದರು.

ನಗರದ ಸಂಡೂರು ಬಾಲಕಿಯರ ವಸತಿ ಶಾಲೆ ಜಂಬುನಾಥನಹಳ್ಳಿ ಶಾಲೆಯ ವಾರ್ಷಿಕ ಕ್ರೀಡಾ ಕೂಟವನ್ನು ಉದ್ದೇಶಿಸಿ ಮಾತನಾಡಿದರು. ಸ್ವತಃ ಅವರು ರಾಜ್ಯ ಮಟ್ಟದ ಕ್ರೀಡಾಪಟುವಾಗಿದ್ದು ಮಕ್ಕಳಿಗೆ ತಮ್ಮ ಜೀವನದ ಕ್ರೀಡಾ ಅನುಭವಗಳನ್ನು ಹಂಚಿಕೊಂಡರು. ಬಾಲ್ಯದಲ್ಲಿ ಬೆಳೆಸಿಕೊಂಡ ಕ್ರೀಡಾ ಮನೋಭಾವ ಜೀವನದುದ್ದಕ್ಕೂ ಸಹಕಾರಿಯಾಗುತ್ತದೆ. ಮಕ್ಕಳಿಗೆ ಪಾಠಗಳು ಎಷ್ಟು ಮುಖ್ಯವೋ ಅಷ್ಟೇ ಆಟಗಳು ಮುಖ್ಯ ಎಂಬ ಭಾವವನ್ನು ಪಾಲಕರೂ ಶಿಕ್ಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕಾಗಿದೆ ಎಂದು ಕರೆನೀಡಿದರು. ಈ ಶಾಲೆ ಆವರಣ ತುಂಬಾ ಸುಂದರವಾಗಿದ್ದು ಧರ್ಮಶಾಲಾದ ಮೈದಾನವನ್ನು ನೆನಪಿಗೆ



ತರುತ್ತದೆ. ಇದರ ಸದುಪಯೋಗ ಮಕ್ಕಳು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸ್ನೈಯೋರ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಬಹಿರ್ಜಿ ಘೋರ್ಪಡೆಯವರು ಶ್ರೀ ಎಸ್ ವೈ ಘೋರ್ಪಡೆ ಎಂಬ ಆಟದ ಮೈದಾನವನ್ನು ಉದ್ಘಾಟಿಸಿದರು ಜೊತೆಗೆ ಕ್ರೀಡಾ ಜ್ಯೋತಿ ಬೆಳಗಿಸಿ ಕ್ರೀಡಾ ಸ್ಪರ್ಧೆಗೆ ಚಾಲನೆ ನೀಡಿದರು. ವೇದಿಕೆಯ ಮೇಲೆ ಸ್ಮೈಯೋರ್ ಸಂಸ್ಥೆಯ ಛೇರ್ಮನ್ ಎಮಿರೆಟ್ಸ್ ಎಸ್ ವೈ ಘೋರ್ಪಡೆ, ಸಂಸ್ಥೆಯ ಅಧ್ಯಕ್ಷರಾದ ಯಶೋಧರಾ ದೇವಿ ಘೋರ್ಪಡೆ, ಆದಿತ್ಯ ಘೋರ್ಪಡೆ, ಭರತ ಘೋರ್ಪಡೆ ಮತ್ತು ಏಕಾಂಬರ ಘೋರ್ಪಡೆ ಉಪಸ್ಥಿತರಿದ್ದರು.

ಮಕ್ಕಳಿಂದ ವಿವಿಧ ಆಟೋಟಗಳು, ಕರಾಟೆ ಪ್ರದರ್ಶನ ನಡೆಯಿತು. ಮಕ್ಕಳು ಉತ್ಸಾಹದಿಂದ ಎಲ್ಲ ಆಟಗಳಲ್ಲಿ ಭಾಗವಹಿಸಿದರು.

# ಗರ್ಭಧಾರಣೆ ತಡೆಗೆ ನೋ ಸ್ಕಾಲ್‌ಪೆಲ್ ವ್ಯಾಸೆಕ್ಟಮಿ ಚಿಕಿತ್ಸೆ

## ಮುಜುಗರಪಡಬೇಕಿಲ್ಲ | ಗರ್ಭಧಾರಣೆಯ ಚಿಂತೆಯಿಂದ ಮುಕ್ತಿ

### ಡಿಎಚ್‌ಒ ಶಂಕರನಾಯ್ಕ ಹೇಳಿಕೆ | ಆರೋಗ್ಯದ ಹಿತಾಸಕ್ತಿ | ಜೀವನಮಟ್ಟ ಸುಧಾರಣೆ | ಮನಃಶಾಂತಿ

**ಹಂಪಿ ಟೈಮ್ಸ್ ಹೊಸಪೇಟೆ**
ಮಹಿಳೆಯರ ಆರೋಗ್ಯ ಸಮಸ್ಯೆ ಹಾಗೂ ಗರ್ಭಧಾರಣೆಯ ಭಯದಿಂದ ಮುಕ್ತಿಗೊಳಿಸಲು ಗಂಡಸರಿಗೆ ನೋ ಸ್ಕಾಲ್‌ಪೆಲ್ ವ್ಯಾಸೆಕ್ಟಮಿ ಚಿಕಿತ್ಸೆ ಪರಿಹಾರ ಎಂದು ಜಿಲ್ಲಾ ವೈದ್ಯಾಧಿಕಾರಿ ಶಂಕರನಾಯ್ಕ ಹೇಳಿದರು.

ನಗರದ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯಲ್ಲಿ ಪುರುಷರಿಗೆ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆ ವಿಧಾನ, ನೋ ಸ್ಕಾಲ್‌ಪೆಲ್ ವ್ಯಾಸೆಕ್ಟಮಿ ಪಾಕ್ಷಿಕ ಆಚರಣೆ ಪೋಸ್ಟರ್‌ನ್ನು ಶನಿವಾರ ಬಿಡುಗಡೆಗೊಳಿಸಿ ಮಾತನಾಡಿದರು. ಇಂದಿನಿಂದಲೇ ನಿರ್ಧರಿಸೋಣ ಕುಟುಂಬ ಯೋಜನೆಯ ಬಗ್ಗೆ ದಂಪತಿಗಳು ಕೂಡಿ ಚರ್ಚಿಸೋಣ ಎಂಬುದು ಈಬಾರಿಯ ಘೋಷವಾಕ್ಯವಾಗಿದೆ. ದಂಪತಿಗಳ ಸಂಬಂಧದಲ್ಲಿ




ಹೆಚ್ಚಿನ ಸಮತೋಲನ ತರಲು ಸಹಾಯಕವಾಗಿದೆ. ದಂಪತಿಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಜೀವನದಲ್ಲಿ ಸುಧಾರಣೆ ಕಾಣಬಹುದಾಗಿದೆ. ಮಹಿಳೆಯರನ್ನು ಗರ್ಭಧಾರಣೆಯ ಚಿಂತೆಯಿಂದ ಮುಕ್ತಿಗೊಳಿಸಬಹುದು. ಗರ್ಭನಿರೋಧಕ ಗುಳಿಗೆ, ಇಂಜೆಕ್ಷನ್‌ಗಳಿಂದಾಗುವ ಅಡ್ಡ ಪರಿಣಾಮಗಳನ್ನು ತಡೆಯಬಹುದು.

ಗರ್ಭನಿರೋಧಕ ಶಸ್ತ್ರಚಿಕಿತ್ಸೆಯು ಅತ್ಯಂತ ಸುಲಭ, ನೋವು ರಹಿತ ಹಾಗೂ ಕಡಿಮೆ ಸಮಯದಲ್ಲಿ ವೇಗದ ಚೇತರಿಕೆ ವಿಧಾನವಾಗಿದೆ. ಮಹಿಳೆಯರ ದೀರ್ಘಾವಧಿ ಸುರಕ್ಷತೆಗಾಗಿ ಪುರುಷರು ಶಸ್ತಚಿಕಿತ್ಸೆಗೊಳಗಾದಲ್ಲಿ ತುಂಬ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ ಜಂಬಯ್ಯ. ಬಿ., ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ ರಾಧಿಕಾ, ತಾಲೂಕು ಅರೋಗ್ಯ ಅಧಿಕಾರಿ ಡಾ.ಬಸವರಾಜ ಹಾಗೂ ಕ್ಷೇತ್ರ ಅರೋಗ್ಯ ಶಿಕ್ಷಣಾಧಿಕಾರಿಗಳಾದ. ಎಂ.ಪಿ ದೊಡಮನಿ ಮತ್ತು ಜಿಲ್ಲಾ ಅರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಮತ್ತು ಇಲಾಖೆ ಸಿಬ್ಬಂದಿಗಳ ಹಾಜರಿದ್ದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE READERS
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com

# ನನಗಿಲ್ಲ ಸಮಸ್ಯೆ!

ಪ್ರಾಪಂಚಿಕ ಜೀವನದಲ್ಲಿ ಕಲಿಯುತ್ತ ತಪ್ಪು ಮಾಡುತ್ತ ತಿದ್ದಿಕೊಳ್ಳುತ್ತ ಅನುಭವಿಸಿ ಸರಳ ಜೀವನ ಸಾಗಿಸಲು ಎಲ್ಲರಿಗೂ ಸಾಧ್ಯವಿದೆ. ಅದಕ್ಕೆ ಪೂರ್ವಾರ್ಜಿತ ಆಸ್ತಿ, ಅಂತಸ್ತು, ಪ್ರತಿಷ್ಠೆ ಮತ್ತು ಭೌತಿಕ ವ್ಯಕ್ತಿತ್ವ ಬೇಕಾಗಿಲ್ಲ. ಭಗವಂತ ಕೊಟ್ಟ ಬುದ್ಧಿ ಮತ್ತು ಮನಸ್ಸಿನ ಸದ್ವಿನಿಯೋಗ ಮಡಿಕೊಳ್ಳುವ ಇಚ್ಚಾ ಶಕ್ತಿ ಬೇಕು.



ಜೀವನದಲ್ಲಿ ಸಂಕಷ್ಟಗಳು ಅಡೆತಡೆಗಳು ದುಃಖ ಯಾರಿಗೆ ಬರುವುದಿಲ್ಲ? ಎಲ್ಲರಿಗೂ ಒಂದಿಲ್ಲ ಒಂದು ರೀತಿ ಬಂದೇ ಬರುತ್ತವೆ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು, ಸ್ವಲ್ಪ ಕಡಿಮೆ ಇರುತ್ತವೆ. ಜತೆಗೆ ಸುಖದ ಸಂಗತಿಗಳೂ ಗೋಚರಿಸಿಕೊಳ್ಳುತ್ತವೆ. ಆದರೆ ಮನುಷ್ಯ ಸುಖಾಂಶಗಳಿಗಿಂತ ಸಂಕಷ್ಟಗಳಿಗೆ ಅತೀ ಮಹತ್ವ ಕೊಟ್ಟು, ತಲೆ ಕೆಡಿಸಿಕೊಂಡು ಬೇರೆಯವರ ಸುಖಗಳೊಂದಿಗೆ ಹೋಲಿಸಿಕೊಂಡು ಹತಾಸೆ ಮತ್ತು ಮತ್ಸರದಿಂದ ಇನ್ನೂ ಹೆಚ್ಚು ವಿಚಾರಿಸುತ್ತ ಅಸಂತುಷ್ಟನಾಗಿ ದೈವ, ಸಮಯ ಅಥವಾ ದೇವರನ್ನು ಆರೋಪಿಸುತ್ತ, ಸಂಕಷ್ಟ ಪರಿಹಾರಕ್ಕೆ ಚಿಂತನೆ ಮಾಡದೇ ಮನಶಾಂತಿ ಕಳೆದುಕೊಳ್ಳುತ್ತಾನೆ. ಅಂದರೆ ತಾನು ವ್ಯವಹರಿಸುವ, ಚಿಂತನೆಗಳ ರೀತಿಯಲ್ಲಿ ವ್ಯತ್ಯಾಸವಿದೆ ಎಂದು ಪರಿಭಾವಿಸುದೇ ಇಲ್ಲ.

ಸಮಸ್ಯೆಗಳನ್ನು "ಇದು ನನಗೆ ಸಮಸ್ಯೆ" ಎಂದು ಪರಿಭಾವಿಸಿದಾಗಲೇ ಅದು ಸಮಸ್ಯೆ ಎನಿಸುವುದು. ನಿಜವಾಗಿಯೂ ಅದು ಸಮಸ್ಯೆಯೇ ಆಗಿರುವದಿಲ್ಲ. ಇದು ಆ ಸಮಸ್ಯಗೆ ಪರಿಹಾರವನ್ನು ಹುಡುಕುವ ಚಿಂತನೆಯ ಕೊರತೆ ಅಷ್ಟೇ. ಈ ಸಂಕಷ್ಟ ನಮ್ಮ ದೈವ ಸಂಕಲ್ಪದಲ್ಲಿದೆ, ಇದರಿಂದ ಹೊರಗೆ ಬರುವುದು ಹೇಗೆ? ಎಂದು ಸಕಾರತ್ಮಕವಾಗಿ ಯೋಚಿಸಿ ಪರ್ಯಾಯ ಪರಿಹಾರ ಮಾರ್ಗವನ್ನು ಹುಡುಕಿಕೊಳ್ಳುವ ನಿಟ್ಟಿನಲ್ಲಿ ಯೋಚಿಸಬೇಕು. ಪ್ರತಿಯೊಂದು ಸಮಸ್ಯೆಗೆ ಉಪಾಯ ಇದ್ದೇ ಇರುತ್ತದೆ ಎಂದು ಸ್ವಯಂ ಆಲೋಚಿಸಬೇಕು.



ಲಕುಮಿಸುತ ಸಾರವಾಡ
ಹೊಸಪೇಟೆ

Scan For Digital Colourful

ಒಮ್ಮೆ ಧೈರ್ಯದಿಂದ ಶಾಂತಚಿತ್ತದಿಂದ, ಗುರು–ಹಿರಿಯರ ಮಾರ್ಗದರ್ಶನದಿಂದ, ದೈವತ್ವದ ಮನೋಭಾವದಿಂದ ಮಾಡುವ ಕೆಲಸದಲ್ಲಿ ವಿಶ್ವಾಸವಿಟ್ಟು ಮುನ್ನಡೆದರೆ ಕಿಂಚಿತ್ ಸಮಯ ತೆಗೆದುಕೊಂಡರೂ ಪರಿಹಾರ ಸಿಕ್ಕೇ ಸಿಗುತ್ತದೆ.

ಜೀವನದಲ್ಲಿ ಯಾವುದಕ್ಕೂ ಭಯಪಡಬೇಕಾಗಿಲ್ಲ, ಸಮಸ್ಯೆಯನ್ನು ವಿಶ್ಲೇಷಿಸಿ ಅರ್ಥಮಾಡಿಕೊಳ್ಳುವುದು ಮುಖ್ಯ. ಹಾಗಂತ ನಾವು ಯಾವಾಗಲೂ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಪ್ರತಿ ಬಾರಿಯೂ ನಾವು ತಪ್ಪುಗಳಿಂದ ಕಲಿಯಬಹುದು. ಅದರಿಂದ ಸುಧಾರಿಸಿಕೊಳ್ಳಬಹುದು. "ಏನಪ್ಪಾ ಹೀಗಾಯಿತು? ಮುಂದೇನು ಗತಿ ? ಎಂದು ಚಿಂತಿಸಿ ಕೊರಗುವದಲ್ಲ. ಎಲ್ಲವೂ ವಿಧಿ ಲಿಖಿತದಂತೆ ಸಾಗುತ್ತದೆ. ಉತ್ತಮ ಆಲೋಚನೆಗಳಿಂದ ಮನಸ್ಸು ಮತ್ತು ಆತ್ಮವನ್ನು ಶುದ್ಧವಾಗಿರಿಸಿ ಕೊಂಡು ನಮ್ಮ ಕರ್ತವ್ಯಗಳನ್ನು ಮಾಡುತ್ತ ಮುಂದೆ ಸಾಗಬೇಕು. ಆಗ ವಿಧಿ ಲಿಖಿತವನ್ನು ಎದುರಿಸಿ ಬದುಕು ಹಸನಾಗಿಸಿಕೊಳ್ಳಬಹುದು.

**ಇನ್ನೇನು ಮತ್ತೇನು ಗತಿಯೆಂದು ಬೆದರದಿರು ।**
**ನಿನ್ನ ಕೈಯೊಳಗಿಹುದೇ ವಿಧಿಯ ಲೆಕ್ಕಣಿಕೆ?॥**
**ಕಣ್ಣಿಗೆಟುಕದೇ ಸಾಗುತಿಹುದು ದೈವದ ಸಂಚು।**
**ತಣ್ಣಗಿರಿಸಾತ್ಮವನು–ಮಂಕುತಿಮ್ಮ॥**

ಎಂದು ಡಿ ವಿ ಜಿ ಅವರು ಹೇಳಿದ ತಾತ್ವಿಕ ಸಾಲುಗಳು ಬದುಕಿಗೆ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತವೆ. ಒಂದು ದಿನ ಭಗವಂತ ಖಂಡಿತಾ ಕರುಣಿಸುತ್ತಾನೆ. ತಾಳ್ಮೆ ಇರಬೇಕು ಅಷ್ಟೇ. ಈ ರೀತಿ ಸಂಕಷ್ಟಗಳಿಂದ ಪಾರಾಗಿ ಬಂದ ನಂತರ ಆತ್ಮ ವಿಶ್ವಾಸ ಬೆಳೆಯುತ್ತದೆ. ಆಗ.... "ನಾನೇ ಉತ್ತಮನು, ನಾನೇ ಸಾಧಕನು, ಇದು ನನ್ನ ಜಾಣ್ಮೆ ಪರಿಶ್ರಮದ ಫಲ" ಎಂದು ಅಹಂ ಭಾವನೆ ಮೂಡಿಸಿಕೊಳ್ಳಬಾರದು. ಗಟ್ಟಿ ಮನದಿಂದ ಸನ್ಮಾರ್ಗದಲ್ಲಿಯೇ ಮುನ್ನಡೆವ ಪ್ರಯತ್ನ ನಿರಂತರವಾಗಿರಬೇಕು. ಜತೆಗೆ ಇನ್ನೊಬ್ಬರನ್ನೂ ಈ ಮಾರ್ಗಕ್ಕೆ ತರುವ ಸಹಕಾರಿ ಮನೋಭಾವನೆ ಬೆಳೆಸಿಕೊಳ್ಳಬೆಕು. ಆಗ ಬಂದ ಕಷ್ಟ, ಸಮಸ್ಯೆ, ಅಡೆತಡೆ ಸಂಕಷ್ಟ ಏನೇ ಬಂದರೂ ಎದೆಗುಂದದೇ ಎದುರಿಸಬಹುದು. ಸರಳ ಜೀವನದ ನಿರ್ವಹಣೆಗೆ ದೃಢ ನಂಬಿಕೆಯ ಅಧ್ಯಾತ್ಮಿಕ ಮನೋಭಾನೆ, ನಿರಂತರ ಸತ್ಕರ್ಮ ಮತ್ತು ಸಕಾರಾತ್ಮಕ ಆಲೋಚನೆಗಳನ್ನು ಮನಸ್ಸಿನೊಂದಿಗೆ ಮತ್ತು ಶುದ್ಧ ಆತ್ಮವಿಶ್ವಾಸದೊಂದಿಗೆ ವ್ಯವಹರಿಸುವುದೇ ಮುಖ್ಯ ಕಾರಣ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ವಿಜಯನಗರ ಜಿಲ್ಲೆ ರಚನೆಗೊಂಡು ಮೂರು ವರ್ಷಗಳಾಗಿವೆ. ಈ ಸಂದರ್ಭದಲ್ಲಿ ಜಿಲ್ಲೆಯ ಮುಂದಿನ ಶೈಕ್ಷಣಿಕ, ಆರ್ಥಿಕ, ಕೃಷಿ, ಕೈಗಾರಿಕೆ, ಪ್ರವಾಸೋದ್ಯಮ, ಸಾಮಾಜಿಕ ಅಭಿವೃದ್ಧಿ, ಮಾನವ ಅಭಿವೃದ್ಧಿ ಹೀಗೆ ಹಲವು ವಿಷಯಗಳ ಕುರಿತು ಚಿಂತಿಸಿ ಸರ್ಕಾರ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಹೊಸ ಜಿಲ್ಲೆ ಬಗ್ಗೆ ಅಭಿಮಾನ ಪ್ರೀತಿ ಅಷ್ಟೇ ಇದ್ದರೆ ಅಭಿವೃದ್ಧಿ ಆಗಲು ಸಾಧ್ಯವಾಗಲಾರದು. ಏಕೆಂದರೆ ಹೊಸ ಜಿಲ್ಲೆಗೆ ತನ್ನದೇ ಆದ ಇತಿಮಿತಿಗಳಿರುತ್ತವೆ. ಹಾಗಾಗಿ ಹಲವು ವರ್ಷಗಳವರೆಗೆ ನಿರ್ದಿಷ್ಟ ವಾದ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಜಿಲ್ಲೆಯ ಶಾಸಕರು ಗಳಿಗೆ, ಉಸ್ತುವಾರಿ ಮಂತ್ರಿಗಳಿಗೆ, ಸ್ಥಳೀಯ ಜನಪ್ರತಿನಿಧಿಗಳಿಗೆ, ಜಿಲ್ಲಾಮಟ್ಟದ ಅಧಿಕಾರಿಗಳಿಗೆ ದೂರ ದೃಷ್ಟಿ ಹಾಗೂ ಇಚ್ಚಾಶಕ್ತಿ ಬೇಕಾಗುತ್ತದೆ. ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಪೂರಕವಾಗಿ ಸಮಾಜವು ಸಹ ಈ ನಿಟ್ಟಿನಲ್ಲಿ ಹೊಸ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿ ಸಲಹೆ ಸೂಚನೆಗಳನ್ನು ನೀಡಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಹಂಪಿ ಟೈಮ್ಸ್ ಪತ್ರಿಕೆಯು ಸಹ ಜಿಲ್ಲೆಯ ಚಿಂತಕರು, ಆರ್ಥಿಕ ತಜ್ಞರು, ಸಮಾಜ ಸೇವಕರು, ಲೇಖಕರು ಹಾಗೂ ಪತ್ರಿಕೆಯ ಓದುಗರು ಮೊದಲಾದವರಿಂದ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಕುರಿತು ಬರಹಗಳನ್ನು ಪ್ರಕಟಿಸಿ, ಜಿಲ್ಲಾಡಳಿತ, ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡಬಯಿಸಿದೆ. ಈ ಹಿನ್ನೆಲೆಯಲ್ಲಿ ಆಸಕ್ತರು ತಮ್ಮ ಚಿಂತನೆ, ವಿಚಾರ ಪೂರ್ಣ ಲೇಖನಗಳನ್ನು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಈ ನಿಟ್ಟಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಾಧ್ಯತೆಗಳು ಕುರಿತ ಮೊದಲ ಲೇಖನವನ್ನಾಗಿ ಪ್ರಕಟಿಸುತ್ತಿದೆ.

# ವಿಜಯನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಾಧ್ಯತೆಗಳು...

## ನಾಲ್ಕು ಶೈಲಿಗಳ ಸಂಗಮ, ಕರ್ನಾಟಕದ ಖಜುರಾಹೋ ಬಾಗಳಿ

ಪ್ರವಾಸೋದ್ಯಮ ಇಂದು ಜಗತ್ತಿನಾದ್ಯಂತ ಬೃಹತ್ ಉದ್ಯಮಗಳಲ್ಲಿ ಒಂದಾಗಿ ಬೆಳದಿದೆ, ಇಷ್ಟೆ ಅಲ್ಲ ಪ್ರಮುಖವಾಗಿ ಆರ್ಥಿಕತೆಯನ್ನು ತಂದು ಕೊಡುವ ಹಾಗೂ ಹೆಚ್ಚಿನ ಉದ್ಯೋಗಗಳನ್ನು ಒದಗಿಸುತ್ತಿರುವ ಉದ್ಯಮವಾಗಿದೆ. ಭಾರತದಲ್ಲಿಯೂ ಸಹ ಪ್ರವಾಸೋಧ್ಯಮ ತೀವ್ರಗತಿಯಲ್ಲಿ ಉದ್ಯಮವಾಗಿ ಬೆಳೆಯುತ್ತಿದೆ. ಹಾಗೇನೆ ಕರ್ನಾಟಕ ರಾಜ್ಯದಲ್ಲಿಯೂ ಪ್ರವಾಸೋದ್ಯಮ ಪ್ರಮುಖ ಮಹತ್ವವನ್ನು ಪಡೆದುಕೊಂಡಿದೆ. ಕರ್ನಾಟಕದ ಚಾರಿತ್ರಿಕ ಪರಂಪರೆಯುಳ್ಳ ಕಲೆ, ವಾಸ್ತು ಶಿಲ್ಪ ದೇವಾಲಯಗಳು, ಐತಿಹಾಸಿಕ ಸ್ಮಾರಕಗಳು, ಶಿಲ್ಪಕಲೆ , ವನ್ಯಜೀವಿ ತಾಣಗಳು, ಜಲಪಾತ ಮೊದಲಾದವುಗಳು ದೇಸಿಯ ಹಾಗೂ ವಿದೇಶಿಯ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇದರಿಂದಾಗಿ ಕರ್ನಾಟಕ ಪ್ರವಾಸೋದ್ಯಮ ರಾಜ್ಯದ ಜಿಎಸ್‌ಟಿಪಿಯಲ್ಲಿ ಶೇಕಡ 14.8ರಷ್ಟು(2019) ಇದ್ದು ಪ್ರತ್ಯೇಕವಾಗಿ ಹಾಗೂ ಪರೋಕ್ಷವಾಗಿ ಸುಮಾರು 30 ಲಕ್ಷಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಕಲ್ಪಿಸಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಮೂಲಕ ಹೊಸ ಜಿಲ್ಲೆಯ ಸುಸ್ಥಿರ ಮತ್ತು ಅಂತರ್ಗತ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯನ್ನು ಬಲಪಡಿಸ ಬೇಕಾಗಿದೆ. ವಿಜಯನಗರ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ ಎಂದರೆ ಹಂಪಿ ಮತ್ತು ಹೊಸಪೇಟೆಯನ್ನು ಕೇಂದ್ರವಾಗಿರಿಸಿಕೊಂಡು ಯೋಚನೆ ಮತ್ತು ಯೋಜನೆಗಳನ್ನು ರೂಪಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ಏಕೆಂದರೆ ಪಶ್ಚಿಮ ಭಾಗದ ಜನರು ತಮ್ಮ ಪ್ರದೇಶದ ಅಭಿವೃದ್ಧಿ ಆಗುತ್ತದೆ ಎಂಬ ಒಂದೇ ಕಾರಣಕ್ಕೆ ಹೊಸ ಜಿಲ್ಲೆಯ ರಚನೆಗೆ ಬೆಂಬಲಿಸಿದ್ದರು. ಅಭಿವೃದ್ಧಿ ವಿಕೇಂದ್ರಿಕರಣ ಆಗದೆ ಹೋದರೆ ಚಾರಿತ್ರಿಕವಾಗಿ ರೂಪಗೊಂಡಿದ್ದ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ಹೊಸ ಜಿಲ್ಲೆಯನ್ನು ಮಾಡಿದ್ದು ಸಾರ್ಥಕವಾಗಲಾರದು.

ವಿಜಯನಗರ ಜಿಲ್ಲೆಯ ಪ್ರವಾಸೋದ್ಯಮವೆಂದರೆ ಹಂಪಿ, ಟಿಬಿ ಡ್ಯಾಂ ಮಾತ್ರ ಎನ್ನುವಂತಾಗಿದೆ. ಆದರೆ ಇವುಗಳ ಆಚೆಯು ಗಮನಹರಿಸಬೇಕಾಗಿದೆ. ವಿಶ್ವ ಪರಂಪರೆಯ ಪಟ್ಟಿಯಲ್ಲಿರುವ ಹಂಪಿ ವಿಶ್ವದ ಗಮನವನ್ನು ಸೆಳೆದಿದೆ. ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರು ಭೇಟಿನೀಡುತ್ತಿದ್ದಾರೆ. ಹೀಗಾಗಿ ಹಂಪಿಯನ್ನು ಕೇಂದ್ರವಾಗಿರಿಸಿಕೊಂಡು ಇಡೀ ಜಿಲ್ಲೆಯ ವಿವಿಧ ಪ್ರದೇಶಗಳನ್ನು ಪ್ರವಾಸೋದ್ಯಮದ ತಾಣಗಳನ್ನಾಗಿ ಮಾಡಬೇಕಾಗಿದೆ. ಏಕೆಂದರೆ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಬೆಳೆಸಲು ವಿಫಲವಾದ ಅವಕಾಶಗಳಿವೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಪಾರಂಪರಿಕ ಕಲೆ, ವಾಸ್ತುಶಿಲ್ಪ, ಸೂಕ್ಷ್ಮಕೆತ್ತನೆಯ ಆಕರ್ಷಕ ದೇವಾಲಯಗಳು, ಕೋಟೆ ಕೊತ್ತಲು, ಧಾರ್ಮಿಕ ಪರಂಪರೆಯನ್ನು ಹೊಂದಿರುವ ಪೌರಾಣಿಕ, ಚಾರಿತ್ರಿಕ ಸ್ಥಳಗಳು ನಿಸರ್ಗದ ಬೆಟ್ಟ ಗುಡ್ಡ, ತುಂಗಭದ್ರ ನದಿ ತೀರದ ಪ್ರೇಕ್ಷಣೀಯ ಸ್ಥಳಗಳು ಹೀಗೆ ಬೇಕಾದಷ್ಟು ಇದ್ದು ಇವುಗಳನ್ನೆಲ್ಲ ಗಮನದಲ್ಲಿರಿಸಿಕೊಂಡು ಹಾಗೂ ರಾಜ್ಯ ಪ್ರವಾಸೋದ್ಯಮದ ಯೋಜನೆ ಯಲ್ಲಿರುವ ಗ್ರಾಮೀಣ ಪ್ರವಾ ಸೋದ್ಯಮ, ಆಧ್ಯಾತ್ಮಿಕ ಪ್ರವಾಸೋದ್ಯಮ ಹಾಗೂ ವನ್ಯಜೀವಿ ಪ್ರವಾಸೋದ್ಯಮಗಳನ್ನು ಸಹ ಅಭಿವೃದ್ಧಿ ಪಡಿಸಬೇಕಾಗಿದೆ.

### ಸೇರ್ಪಡೆಯಾಗಬೇಕಾದ ಪ್ರವಾಸಿ ತಾಣಗಳು

ಐತಿಹಾಸಿಕ ಕಲೆ ವಾಸ್ತು ಶಿಲ್ಪ ಮತ್ತು ಕೋಟೆ ಇವುಗಳನ್ನು ಕೇಂದ್ರವಾಗಿರಿಸಿಕೊಂಡು ಹರಪನಹಳ್ಳಿ ತಾಲೂಕಿನ ಬಾಗಳಿ, ನೀಲಗುಂದ, ಉಚ್ಚಂಗಿದುರ್ಗದ ಪುರಾತನ ಕೋಟೆಯನ್ನು ಹಡಗಲಿ ತಾಲೂಕಿನ ಹಡಗಲಿ, ಕುರುವತ್ತಿ, ಹಿರೇಹಡಗಲಿ ಮಾಗಳ ಮೊದಲಾದ ಊರುಗಳಲ್ಲಿರುವ ಸ್ಮಾರಕಗಳನ್ನು ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರ್ಪಡೆಗೊಳಸಬೇಕಾಗಿದೆ. ಬಾಗಳಿ ಹರಪನಹಳ್ಳಿ ತಾಲೂಕಿನ ಒಂದು ಚಿಕ್ಕ ಗ್ರಾಮ ಹೊಸಪೇಟೆ ಹರಪನಹಳ್ಳಿ ರಸ್ತೆಯ ಮುಖ್ಯ ರಸ್ತೆಯಿಂದ ಎರಡು ಕಿಲೋಮೀಟರ್ ದೂರದಲ್ಲಿದೆ .ಇಲ್ಲಿ 10ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವ ದೇವಸ್ಥಾನವು ನಾಲ್ಕು ಶೈಲಿಗಳ ಸಂಗಮದಿಂದ ಪ್ರಸಿದ್ಧಿ ಪಡೆದಿದೆ. ಗರ್ಭಗೃಹ ರಾಷ್ಟ್ರಕೂಟದ ವಾಸ್ತುಶಿಲೆಯನ್ನು ಹೊಂದಿದ್ದರೆ, ನವರಂಗ ಚಾಲುಕ್ಯ ಶೈಲಿಯನ್ನು, ಸುಖನಾಶಿ ಹೊಯ್ಸಳ ಶೈಲಿಯನ್ನು, ರಾಜಗೋಪುರ ವಿಜಯನಗರ ಶೈಲಿಯನ್ನು ಒಳಗೊಂಡಿದೆ. ಹೀಗಾಗಿ ಇದು ನಾಲ್ಕು



ಶೈಲಿಗಳ ಅಪರೂಪದ ದೇವಾಲಯ. 64 ಕಂಬಗಳ ದೇವಾಲಯ ಇದಾಗಿದ್ದು, ಒಂದೊಂದು ಕಂಬವು ಬೇರೆ ಬೇರೆ ವಿನ್ಯಾಸದಲ್ಲಿವೆ. ಎರಡು ದ್ವಾರಗಳನ್ನು ಹೊಂದಿದ್ದು, ದೇವಾಲಯದ ಹೊರ ಭಾಗದಲ್ಲಿ ಮಿಥುನಶಿಲ್ಪಗಳಿರುವುದರಿಂದ ಇದನ್ನು 'ಕರ್ನಾಟಕದ ಖಜುರಾಹೋ' ಎಂದು ಕರೆಯುತ್ತಾರೆ. ಇಂತಹ ಅಪರೂಪದ ವಾಸ್ತುಶಿಲ್ಪ ಹಿನ್ನಲೆಯ ದೇವಸ್ಥಾನವನ್ನು ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರ್ಪಡೆಮಾಡಿ ಈ ಗ್ರಾಮವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಬೇಕಾಗಿದೆ.

ಹಾಗೂ ಹಡಗಲಿ ತಾಲೂಕಿನ ಕುರುವತ್ತಿ, ಹಿರೇಹಡಗಲಿ, ಮಾಗಳ ಈ ವಾಸ್ತುಶಿಲ್ಪ ದೇವಾಲಯಗಳನ್ನು ಸೇರ್ಪಡೆಮಾಡಬೇಕಾಗಿದೆ. ಪಾರಂಪರಿಕ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸ್ಥಳಗಳಾದ ಉಜ್ಜಯಿನಿ, ಕೊಟ್ಟೂರು, ಮೈಲಾರ, ಮೊದಲಗಟ್ಟಿ, ಕೂಲಹಳ್ಳಿ ಇವುಗಳನ್ನು ಧಾರ್ಮಿಕ ಪರಂಪರೆಯ ಪ್ರವಾಸೋದ್ಯಮದ ಪಟ್ಟಿಯಲ್ಲಿ ಹಾಗೂ ಕೂಡ್ಲಿಗಿ ತಾಲೂಕಿನ ಗುಡೆಕೋಟೆ ಕರಡಿಧಾಮವನ್ನು ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನ ಅಂಕಸಮುದ್ರವನ್ನು ವನ್ಯಜೀವಿ ಪ್ರವಾಸಿ ತಾಣಗಳನ್ನಾಗಿ ರಾಜ್ಯ ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರ್ಪಡಿಸಬೇಕಾದ ಕಾರ್ಯವನ್ನು ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಇಲಾಖೆ ಈ ಕಾರ್ಯವನ್ನು ಮೊಟ್ಟ ಮೊದಲ ಬಾರಿಗೆ ಕೈಗೆತ್ತಿಕೊಂಡು ಪೂರೈಸಬೇಕಾಗಿದೆ.

### ನದಿ ತೀರ ಹಾಗೂ ಬೆಟ್ಟಗುಡ್ಡಗಳ ಪ್ರವಾಸೋದ್ಯಮ

ತುಂಗಭದ್ರಾ ನದಿಯು ಹಾವೇರಿ, ಕೊಪ್ಪಳ ಜಿಲ್ಲೆಗಳ ಗಡಿಯಾಗಿ ಹರಿಯುತ್ತಿದೆ. ಈ ನದಿಯ ತೀರದಲ್ಲಿ ಕುರುವತ್ತಿಯಿಂದ ಮೈಲಾರ, ಹೊಳಲು, ಮೊದಲ ಘಟ್ಟ, ಹಂಪಿಯವರಿಗೆ ಚಾರಿತ್ರಿಕ ಮತ್ತು ಧಾರ್ಮಿಕ ಪರಂಪರೆಯ ದೇವಸ್ಥಾನಗಳಿವೆ. ಈ ನದಿತೀರದ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಅವಕಾಶಗಳಿವೆ. ಹಡಗಲಿ ಹರಪನಹಳ್ಳಿ ರಸ್ತೆಯಲ್ಲಿರುವ ಮಲ್ಲೇಶ್ವರ ಬೆಟ್ಟವಿದೆ. ಇದು ಪ್ರಾಕೃತಿಕವಾಗಿರುವ ಬೆಟ್ಟ. ಈ ಬೆಟ್ಟದಲ್ಲಿ ಮಲ್ಲೇಶ್ವರ ದೇವಸ್ಥಾನವಿದ್ದು, ಈ ಭಾಗದ ಜನರ ಭಕ್ತಿ, ಶ್ರದ್ಧೆಗಳ ಧಾರ್ಮಿಕ ಸ್ಥಳವೂ ಆಗಿದೆ. ಧಾರ್ಮಿಕವಾಗಿ ಸಾವಿರಾರು ಜನರು ಈ ಸ್ಥಳಕ್ಕೆ ಬಂದು ಹೋಗುತ್ತಿದ್ದಾರೆ. ಹೀಗಾಗಿ ಧಾರ್ಮಿಕವಾಗಿ, ಪ್ರಾಕೃತಿಕವಾಗಿಯೂ ಈ ಗುಡ್ಡವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಆಕರ್ಷಿಸುವಂತೆ ಮಾಡಲು ಬಹಳಷ್ಟು ಅವಕಾಶಗಳಿವೆ. ಹೊಸಪೇಟೆಯ ಪಕ್ಕದಲ್ಲಿ ಚಾರಿತ್ರಿಕ ಧಾರ್ಮಿಕ ಜಂಬುನಾಥೇಶ್ವರ ದೇವಾಲಯದ ಬೆಟ್ಟದ ಮೇಲಿರುವ ದೇವಸ್ಥಾನವನ್ನು ಸಹ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಬಹುದಾಗಿದೆ.

### ಪಾರಂಪರಿಕ ಧಾರ್ಮಿಕ ಮತ್ತು ಅಧ್ಯಾತ್ಮಿಕಸ್ಥಳಗಳು.

ಜಿಲ್ಲೆಯಲ್ಲಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಜಾನಪದ ಸಂಸ್ಕೃತಿಯನ್ನು ಹೊಂದಿರುವ ಸ್ಥಳಗಳು ನಾಡಿನಲ್ಲಿಯೇ ಪ್ರಸಿದ್ಧಿ ಪಡೆದುಕೊಂಡಿವೆ. ಅವುಗಳಲ್ಲಿ ಪ್ರಮುಖವೆಂದರೆ ಉಜ್ಜನಿಯ ಮರಳು ಸಿದ್ದೇಶ್ವರ ಪಂಚಪೀಠ. ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನ, ಕುರುವತ್ತಿಯ ಮಲ್ಲಿಕಾರ್ಜುನ ದೇವಸ್ಥಾನ, ಪೌರಾಣಿಕ, ಧಾರ್ಮಿಕ, ಹಾಗೂ ಜನಪದ ಸಂಸ್ಕೃತಿಯ ಪ್ರತೀಕವಾದ ಮೈಲಾರದ ಮೈಲಾರಲಿಂಗೇಶ್ವರ ದೇವಸ್ಥಾನ ಮೊದಲಾದವುಗಳು. ಜನರ ಭಕ್ತಿ ಶ್ರದ್ಧೆ ಧಾರ್ಮಿಕ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಈ ಸ್ಥಳಗಳಿಗೆ ಹಬ್ಬ ಹುಣ್ಣಿಮೆ, ಅಮಾವಾಸ್ಯೆ ವಿಶೇಷವಾಗಿ ಜಾತ್ರೆಗಳಿಗೆ ಲಕ್ಷಾಂತರ ಜನರು ಸೇರುತ್ತಾರೆ ಈ ಹಿನ್ನೆಲೆಯಲ್ಲಿ ಈ ಚಾರಿತ್ರಿಕ ಕೇಂದ್ರಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾರ್ಪಡಿಸಿಕೊಂಡು ಪ್ರವಾಸಿಗಳನ್ನು ಆಕರ್ಷಿಸಲು ಎಲ್ಲಾ ಅವಕಾಶಗಳಿವೆ. ವರ್ಷಪೂರ್ತಿ ಜನರು ಈ ಸ್ಥಳಗಳಿಗೆ ಬರುತ್ತಲೇ ಇರುತ್ತಾರೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಪಾರಂಪರಿಕ ಧಾರ್ಮಿಕ ಆಧ್ಯಾತ್ಮಿಕ ಪ್ರವಾಸ ಉದ್ಯಮವನ್ನು ಬೆಳೆಸಲು ಸಾಕಷ್ಟು ಅವಕಾಶಗಳಿವೆ.

### ವನ್ಯಜೀವಿ ಪ್ರವಾಸೋದ್ಯಮ

ವನ್ಯಜೀವಿ ಪ್ರವಾಸೋದ್ಯಮ ಎಲ್ಲ ವಯೋಮಾನದವರನ್ನು ಸಹಜವಾಗಿ ಆಕರ್ಷಿಸುತ್ತದೆ. ಹೀಗಾಗಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗುಡೆಕೋಟೆ ಕರಡಿಧಾಮ ಮತ್ತು ಅಂಕಸಮುದ್ರ ಪಕ್ಷಿಧಾಮವನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಬಹುದಾಗಿದೆ. ಅವಿಭಜಿತ ಬಳ್ಳಾರಿ ಜಿಲ್ಲೆಯ ದರೋಜಿ ಕರಡಿ ಧಾಮವು ದೇಶದಲ್ಲೇ ವಿಶಿಷ್ಟವಾಗಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇದೇ ರೀತಿ ಗುಡೆಕೋಟೆ ಕರಡಿಧಾಮವನ್ನು ಪ್ರವಾಸಿ ತಾಣವನ್ನಾಗಿ ಆಕರ್ಷಿಸಲು ಎಲ್ಲಾ ಅವಕಾಶಗಳಿವೆ. ಹೀಗಾಗಿ ವಿಜಯನಗರ ಜಿಲ್ಲೆಯ ಗುಡೆಕೋಟೆ ಅರಣ್ಯ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಿ ಜನರನ್ನು ಪ್ರವಾಸೋದ್ಯಮದ ಸಲುವಾಗಿ ಆಕರ್ಷಿಸುವ ಎಲ್ಲಾ ಅವಕಾಶಗಳಿವೆ. ಹಗರಿಬೊಮ್ಮನಹಳ್ಳಿ ಅಂಕಸಮುದ್ರ ಪಕ್ಷಿಧಾಮವು ವಿಶೇಷವಾಗಿದೆ. ದೇಶ ವಿದೇಶಗಳ ಪಕ್ಷಿಗಳು ಇಲ್ಲಿಯ ಕೆರೆಗೆ ವಲಸೆ ಬರುತ್ತಿದ್ದು, ಉತ್ತರ ಕರ್ನಾಟಕದಲ್ಲೇ ವಿಶೇಷವಾದ ಈ ಕೆರೆಯು ಪಕ್ಷಿಧಾಮವಾಗಿದೆ. ಪಕ್ಷಿಧಾಮವಾಗಿ ಪ್ರವಾಸೋದ್ಯಮದ ಸಲುವಾಗಿ ಅಭಿವೃದ್ಧಿ ಪಡಿಸುವುದರಿಂದ ಪಕ್ಷಿಗಳಿಗೆ ತೊಂದರೆ ಆಗುವುದು ಸಹಜ. ಹೀಗಾಗಿ ಈ ಬಗ್ಗೆ ಪಕ್ಷಿತಜ್ಞರೊಂದಿಗೆ ಆಲೋಚಿಸಿ ಈ ಪಕ್ಷಿಧಾಮವನ್ನು ಸಹ ಪ್ರವಾಸಿಗರ ಆಕರ್ಷಣೆಯ ಸ್ಥಳವನ್ನಾಗಿ ಮಾಡಲು ಅವಕಾಶಗಳು. ಜಿಲ್ಲೆಯಲ್ಲಿ ಚಾರಿತ್ರಿಕವಾದ ಹತ್ತಾರು ಕೆರೆಗಳಿವೆ.ಇವುಗಳಲ್ಲಿ ಕಮಲಾಪುರದ ಕೆರೆ ವಿಜಯನಗರ ಕಾಲದ್ದು. ಈ ಕೆರೆಯಲ್ಲಿ ಪ್ರವಾಸಿ ಆಕರ್ಷಣೆಗಾಗಿ ವಾಟರ್ ಸ್ಪೋರ್ಟ್ಸ್ ಗಳನ್ನು ಆಯೋಜಿಸಬಹುದು.

"ಕರ್ನಾಟಕ ಒಂದು ರಾಜ್ಯ ಹಲವು ಜಗತ್ತು"ಎಂಬ ತನ್ನ ಬ್ರಾಂಡ್‌ಗೆ ಅನುಗುಣವಾಗಿ ಪ್ರವಾಸೋದ್ಯಮ ಇಲಾಖೆಯ ಹಲವಾರು ಯೋಜನೆಗಳು ರೂಪಿಸಿದೆ. ಇದರಿಂದಾಗಿ ಲಕ್ಷಾಂತರ ಪ್ರವಾಸಿಗರ ಹಂಪಿಗೆ ಬಂದ ಹೋಗುತ್ತಿದ್ದಾರೆ. ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತದೆ ಹಾಗಾಗಿ ಹಂಪಿಗೆ ಬರುವ ಪ್ರವಾಸಿಗರನ್ನು ವಿಜಯನಗರ ಜಿಲ್ಲೆಯ, ವಿವಿಧ ಪ್ರದೇಶಗಳಿಗೆ ಭೇಟಿ ನೀಡುವಂತೆ ಮಾಡುವ ಅವಶ್ಯವಿದೆ. ಇದರಿಂದಾಗಿ ಗ್ರಾಮೀಣ ಪ್ರವಾಸೋದ್ಯಮನ್ನು ಅಭಿವೃದ್ಧಿಪಡಿಸಿದಂತಾಗುತ್ತದೆ ಹಾಗೂ ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯು ಸಹ ಉಂಟಾಗುತ್ತದೆ .ಈ ಬಗ್ಗೆ ಜಿಲ್ಲಾಡಳಿತ ಜಿಲ್ಲಾ ಮಂತ್ರಿಗಳು ಶಾಸಕರು ಸಮಗ್ರವಾದ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಅವಶ್ಯಕತೆ ಇದೆ. ಇದರಿಂದಾಗಿ ಹೊಸ ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಎಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಆಯ್ಕೆಯಾದ ಅತ್ಯುತ್ತಮ ಚಿತ್ರಗಳು


**ಹಂಪಿ ಟೈಮ್ಸ್ ಹೊಸಪೇಟೆ:**
ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯಬೇಕೆಂದು ಪರಿಶ್ರಮಪಡುತ್ತಿರುವ ಮತ್ತಷ್ಟು ಕಲಿಕಾ ಆಸಕ್ತಿ ಹೆಚ್ಚಿಸಲು ಹಂಪಿ ಟೈಮ್ಸ್ ಬಳಗ ಕರೆನೀಡಿದ್ದ ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆಗೆ ಎಲ್ಲೆಡೆಯಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಿಜಯನಗರ ಜಿಲ್ಲೆ ಸೇರಿದಂತೆ ನಾನಾ ಜಿಲ್ಲೆಗಳಲ್ಲಿ ಶಾಲಾ ವಿದ್ಯಾರ್ಥಿಗಳು ಶಾಲೆಯಲ್ಲೆ ಚಿತ್ರ ಬಿಡಿಸಿ, ಅವರ ಶಿಕ್ಷಕರಿಗೆ ತೋರಿಸಿದ್ದಾರೆ. ಚಿತ್ರ ಬರೆಯಲ್ಲಿ ಮಕ್ಕಳ ಆಸಕ್ತಿಯನ್ನು ಕಂಡ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ, ಮಾರ್ಗದರ್ಶನ ಮಾಡಿದ್ದಾರೆ. ನಿಗದಿತ ಸಮಯದೊಳಗೆ ಬಿಡಿಸಿದ ಅತ್ಯುತ್ತಮ ಚಿತ್ರವನ್ನು ಶಾಲಾ ಮುಖ್ಯಗುರುಗಳ ಸಹಿಯೊಂದಿಗೆ ಹಂಪಿ ಟೈಮ್ಸ್ ಬಳಗಕ್ಕೆ ಆಯಾ ಶಾಲಾ ಶಿಕ್ಷಕರು ಕಳುಹಿಸಿದ್ದಾರೆ.

ನಿಜಕ್ಕೂ ಮಕ್ಕಳಲ್ಲಿ ಕಲಿಕಾಸಕ್ತಿ ಇದೆ ಎಂಬುದನ್ನು ವಿದ್ಯಾರ್ಥಿಗಳು ಸಾಬೀತುಪಡಿಸಿದ್ದಾರೆ. ಮಕ್ಕಳಲ್ಲಿ ಕ್ರಿಯಾಶೀಲತೆ ಹೆಚ್ಚಿಸಲು ಶಿಕ್ಷಕರ ಜೊತೆಯಾಗಿ ಹಂಪಿ ಟೈಮ್ಸ್ ಪತ್ರಿಕೆ ಸದಾ ಜೊತೆಯಾಗಿರಲಿದೆ.


ನಿಗದಿತ ಸಮಯದೊಳಗೆ, ನಿಯಮಾನುಸಾರ ಚಿತ್ರಬಿಡಿಸಿ ಕಳುಹಿಸಿದ ಚಿತ್ರಗಳನ್ನು ಪರಿಗಣಿಸಲಾಗಿದೆ. ವಿಜ್ಞಾನ ಶಿಕ್ಷಕ ತಂಡ ಎಲ್ಲವನ್ನೂ ಕೂಲಂಕುಷವಗಿ ಪರಿಶೀಲಿಸಿ ಅತ್ಯುತ್ತಮ ಚಿತ್ರಗಳನ್ನು ಆಯ್ಕೆ ಮಾಡಿದ್ದು, ಆಯ್ಕೆಯಾದ ಚಿತ್ರ ಮತ್ತು ಮಕ್ಕಳ ವಿವರ ಈ ಕೆಳಗಿನಂತಿದೆ.

**ಅತ್ಯತ್ತಮ ಚಿತ್ರಗಳು:**
ಹಗರಿಬೊಮ್ಮನಹಳ್ಳಿ ತಾಲೂಕಿನ ಗದ್ದಿಗೇರಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಬಿ.ಸುಧಾ ಮತ್ತು ಕಂಪ್ಲಿಯ ಚೇತನ ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿ ಚೇತನ.ಎ (ಪ್ರಥಮ), ಹೊಸಪೇಟೆ ತಾಲೂಕಿನ ತೆಲುಗೋಲಿ–ಚಿಲಕನಹಟ್ಟಿಯ ಶ್ರೀ ತೆಲುಗುಬಾಳು ಸಿದ್ಧ ಪ್ರೌಢಶಾಲೆಯ ವಿದ್ಯಾರ್ಥಿ ಕನಕರಾಯ (ದ್ವಿತೀಯ), ಹ.ಬೊ.ಹಳ್ಳಿ ಬಾಚಿಗೊಂಡನಹಳ್ಳಿ ಕೌದಿಮಹಂತೇಶ್ವರ ಪ್ರೌಢಶಾಲೆಯ ಹೆಚ್.ಮಹೇಶ್ವರಿ (ತೃತೀಯ) ಹಾಗೂ ಹೊಸಪೇಟೆ ಚಿತ್ತವಾಡಗಿ (ಪ್ರೌಢಶಾಲೆ) ಸ.ಸಂ.ಪ.ಪೂ. ಕಾಲೇಜ್ ವಿದ್ಯಾರ್ಥಿನಿ ರುಕ್ಸಾನ (ಸಮಾಧಾನಕರ) ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡ ದ ಮಾಸ್ಟರ್ ಶಿವತನಯ ಅವರು ತಿಳಿಸಿದ್ದಾರೆ.


ವಿದ್ಯಾರ್ಥಿಗಳು ನಿರಂತರವಾಗಿ ವಿಜ್ಞಾನ ಚಿತ್ರಬಿಡಿಸುವ ಕಲೆ ರೂಢಿಸಿಕೊಂಡಲ್ಲಿ ಪರೀಕ್ಷೆಯಲ್ಲಿ ವಿಜ್ಞಾನ ಪರೀಕ್ಷೆಯನ್ನು ಉತ್ತಮವಾಗಿ ಬರೆದು ಹೆಚ್ಚು ಅಂಕಗಳಿಸಬಹುದು. ಪ್ರತಿ ವಾರ ವಿಷಯವನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಸಿಕೊಂಡು ಪ್ರಯೋಜನ ಪಡೆಯಬೇಕು ಎಂದು ತಿಳಿಸಿದ್ದಾರೆ. ಮಕ್ಕಳ ಆಸಕ್ತಿಗೆ ಪ್ರೋತ್ಸಾಹ ನೀಡಿದ ಸಕಲ ಶಿಕ್ಷಕರಿಗೂ ಹೃತ್ಪೂರ್ವ ಧನ್ಯವಾದಗಳನ್ನು ಹಂಪಿ ಟೈಮ್ಸ್ ಬಳಗ ತಿಳಿಸಿದೆ.




ಪ್ರಥಮ ಸ್ಥಾನ : ಬಿ.ಸುಧಾ ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ ಹ.ಬೊ.ಹಳ್ಳಿ ತಾ.





ಪ್ರಥಮ ಸ್ಥಾನ : ಚೇತನ.ಎ ಚೇತನ ವಿದ್ಯಾನಿಕೇತನ ಶಾಲೆ, ಕಂಪ್ಲಿ



ದ್ವಿತೀಯ ಸ್ಥಾನ : ಕನಕರಾಯ, ಶ್ರೀ ತೆಲುಗುಬಾಳು ಸಿದ್ಧ ಪ್ರೌಢಶಾಲೆ, ತೆಲುಗೊಳಿ–ಚಿಲಕನಹಟ್ಟಿ, ಹೊಸಪೇಟೆ ತಾ.



ತೃತೀಯ ಸ್ಥಾನ : ಹೆಚ್.ಮಶೇಶ್ವರಿ ಕೌದಿಮಹಾಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ. ಹ.ಬೊ.ಹಳ್ಳಿ ತಾ.




ಸಮಾಧಾನಕರ ಸ್ಥಾನ : ರುಕ್ಸಾನ ಸ.ಸಂ.ಪ.ಪೂ.ಕಾಲೇಜ್ (ಪ್ರೌಢಶಾಲಾ ವಿಭಾಗ), ಚಿತ್ತವಾಡಗಿ, ಹೊಸಪೇಟೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ

ಹಂಪಿ ಟೈಮ್ಸ್ ಮಾರ್ಗದರ್ಶಿ
Academic Year 2024/2025



ಈ ಬಾರಿ ಫಲಿತಾಂಶ ನಮ್ಮದೆ



ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಈ ಬಾರಿ ಶೇ.100ರಷ್ಟು ಅಂಕಗಳಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ವಿಜಯನಗರ ಜಿಲ್ಲೆಯ ವಿಷಯವಾರು ನುರಿತ ಮಾರ್ಗದರ್ಶಿ ಶಿಕ್ಷಕರಿಂದ ಸಿದ್ಧಗೊಂಡ ಪ್ರಶ್ನೋತ್ತರ ಸರಣಿಯನ್ನು ಈ ಬಾರಿ ಫಲಿತಾಂಶ ನಮ್ಮದೆ ಶೀರ್ಷಿಕೆಯಡಿ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ ನಿತ್ಯ ಪ್ರಕಟಿಸಲಾಗುತ್ತಿದೆ.
ವಿದ್ಯಾರ್ಥಿಗಳು ಪ್ರತಿನಿತ್ಯ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯವಾರು ಪ್ರಶ್ನೋತ್ತರಗಳನ್ನು ಅಂದೇ ಬರೆದಿಟ್ಟುಕೊಂಡು ನಿರಂತರ ಅಭ್ಯಾಸ ಮಾಡಿದರೆ ಹೆಚ್ಚು ಅಂಕಗಳಿಕೆ ನಿಶ್ಚಿತ. ಎಸ್ಸೆಸ್ಸೆಲ್ಸಿ ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಸಹ ಹಂಪಿ ಟೈಮ್ಸ್ ಮಾರ್ಗದರ್ಶಿ ಅಭ್ಯಾಸ ಮಾಡಿ ತಮ್ಮ ಕನಸನ್ನು ಸಾಕರಗೊಳಿಸಿಕೊಳ್ಳಬಹುದು.

ಸುಲಭ ಮಾರ್ಗೋಪಾಯಗಳು
- ಪ್ರತಿದಿನ ಬರೆದು, ಓದುವೆ ಎಂಬುದು ಮೊದಲ ಗುರಿಯಾಗಲಿ
- ಬರೆದು ಓದುವ ಅಭ್ಯಾಸ ರೂಢಿಸಿಕೊಳ್ಳಿ
- ಓದುವಾಗ ಮೊದಲು ಕಂಠಪಾಠ ಮಾಡಬಾರದು
- ಟೆಸ್ಟ್ ಪರೀಕ್ಷೆಯಲ್ಲಿ ಎಂದಿಗೂ ಯಾವುದೇ ಪ್ರಶ್ನೆಗಳನ್ನು ಬಿಡಬೇಡಿ
- ಕಳೆದ ವರ್ಷಗಳಲ್ಲಿ ಕೇಳಿದ ಪ್ರಶ್ನೆಗಳನ್ನು ಹೆಚ್ಚು ಅಭ್ಯಾಸ ಮಾಡಿ
- ಪುಸ್ತಕಗಳಲ್ಲಿನ ಪಠ್ಯವನ್ನು ಸಂಪೂರ್ಣವಾಗಿ ಓದಿರಿ.
- ಗೊಂದಲಗಳಿದ್ದಲ್ಲಿ ನಿಮ್ಮ ವಿಷಯವಾರು ಶಿಕ್ಷಕರನ್ನು ಕೇಳಿ ಪರಿಹರಿಸಿಕೊಳ್ಳಿ



CONTACT US
94486 33038
www.hampitimes.com / https://epaper.hampitimes.com

ನಿನ್ನ ಏಳ್ಗೆಗೆ ನೀನೇ ಶಿಲ್ಪಿ

scan to read

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳ್ಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಅರ್ಥಶಾಸ್ತ್ರ ಅಧ್ಯಾಯ 30 : ಗ್ರಾಮೀಣಾಭಿವೃದ್ಧಿ

**1.ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ನೀಡಿದವರು ಯಾರು?**
ಉತ್ತರ: ಮಹಾತ್ಮ ಗಾಂಧೀಜಿ.

**2. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು**
ಉತ್ತರ: ಮಹಾತ್ಮ ಗಾಂಧೀಜಿ.

**3. ಭಾರತದಲ್ಲಿ ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆ ಯಾವಾಗ ಜಾರಿಗೆ ಬಂದಿತು?**
ಉತ್ತರ: 1993ರ ಸಂವಿಧಾನದ 73ನೇ ತಿದ್ದುಪಡೆಯ ಮೂಲಕ ಜಾರಿಗೆ ಬಂದಿತು?

**4. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ**
ಉತ್ತರ: 1) ಗ್ರಾಮ ಪಂಚಾಯ್ತಿ, 2) ತಾಲೂಕ ಪಂಚಾಯ್ತಿ, 3) ಜಿಲ್ಲಾ ಪಂಚಾಯ್ತಿ.

**5. ಪಂಚಾಯತ್ ರಾಜ್ ಸಂಸ್ಥೆಗಳು ಯಾವ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ ?**
ಉತ್ತರ: ಪ್ರಜಾಪ್ರಭುತ್ವ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ

**6. ಗ್ರಾಮೀಣಾಭಿವೃದ್ಧಿ ಎಂದರೇನು?**
ಉತ್ತರ: ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದನ್ನು ಗ್ರಾಮೀಣಾಭಿವೃದ್ಧಿ ಎನ್ನುವರು.

**7. ಅಧಿಕಾರ ವಿಕೇಂದ್ರೀಕರಣ ಎಂದರೇನು?**
ಉತ್ತರ:. ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನುತ್ತಾರೆ.

**8. ಗ್ರಾಮೀಣ ವಸತಿ ಯೋಜನೆಗಳಾವುವು? (ಜೂನ್ 2022)**
ಉತ್ತರ: * ಇಂದಿರಾ ಅವಾಸ್ ಯೋಜನೆ * ಆಶ್ರಯ ಯೋಜನೆ * ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ * ಬಸವ ಯೋಜನೆ

**9. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?**
ಉತ್ತರ: ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿ ರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸುತ್ತಿಲ್ಲ.

**10 ಗ್ರಾಮೀಣ ಪ್ರದೇಶದ ಬಡತನ ನಿವಾರಣೆಗೆ ಸರ್ಕಾರ ಜಾರಿಗೊಳಿಸಿದ ಎರಡು ಪ್ರಮುಖ ಯೋಜನೆಗಳನ್ನು ತಿಳಿಸಿ**
ಉತ್ತರ: 1. ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, 2. ಸ್ವರ್ಣಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ

**11. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ / ಗ್ರಾಮೀಣಾಭಿವೃದ್ಧಿಯು ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ?**
ಉತ್ತರ: * ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿವಾರಿಸುವುದು * ಕೃಷಿ ಹಾಗೂ ಅದರ ಉಪಕಸುಬುಗಳನ್ನು ಲಾಭದಾಯಕವಾಗಿಸುವುದು. * ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದು.
* ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು
* ಜನರ ಕೌಶಲ್ಯ ಮತ್ತು ದುಡಿಯುವ ಸಾಮರ್ಥ್ಯವನ್ನು ಹೆಚ್ಚಿಸು ವುದು.
* ಸಣ್ಣ ಮತ್ತು ಗುಡಿ ಕೈಗಾರಿಕೆಗಳನ್ನು ಪೋಷಿಸುವುದು.
* ಹಿಂದುಳಿದ ವರ್ಗಗಳಿಗೆ ನಿರಂತರವಾಗಿ ಉದ್ಯೋಗಗಳನ್ನು ಒದಗಿಸುವುದು. * ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಳ್ಳಿಗರು ಭಾಗವಹಿಸುವಂತೆ ಮಾಡುವುದು.

**12. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.**
ಉತ್ತರ: 1. ಗ್ರಾಮದ ಆಡಳಿತದ ಅಧಿಕಾರ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮದ ಜನರಿಗೇ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನುತ್ತಾರೆ.
2. ಇದರಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು.
3. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
4. ವಿಕೇಂದ್ರೀಕರಣವು ಶೋಷಣೆಗಳನ್ನು ತಡೆಯುತ್ತದೆ,
5. ವಿಕೇಂದ್ರೀಕರಣವು ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ.
6. ಸಹಾನುಭೂತಿ ಮತ್ತು ಸಹಕಾರದ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ

**13 ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.(ಜೂ2023,2024)**
ಉತ್ತರ: 1 ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.
2 ಉದ್ಯೋಗಾವಕಾಶಗಳನ್ನು ಒದಗಿಸುವುದು.
3 ಕೃಷಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದು.
4 ಗೃಹ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.
5 ಬಡತನ ಮತ್ತು ನಿರುದ್ಯೋಗವನ್ನು ನಿವಾರಿಸುವುದು.
6 ಗ್ರಾಮೀಣ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು.
7 ಅರ್ಹರಿಗೆ ಸರ್ಕಾರದ ಸೌಲಭ್ಯಗಳನ್ನುಒದಗಿಸುವುದು
8 ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.
9 ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸುವುದು

**14.ಗ್ರಾಮೀಣಾಭಿವೃದ್ಧಿಯಲ್ಲಿ 'ಮಹಿಳಾ ಸ್ವಸಹಾಯ ಸಂಘ' /ಸ್ತ್ರೀಶಕ್ತಿ ಸಂಘಗಳ ಪಾತ್ರವನ್ನು ವಿವರಿಸಿ. (ಏ 2023)**
ಉತ್ತರ: 1. ಗ್ರಾಮೀಣ ಮಹಿಳೆಯರ ಸಬಲಿಕರಣವಾಗುತ್ತದೆ
2. ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಜೀವನ ಸಾಧ್ಯವಾಗುತ್ತದೆ
3. ಮಹಿಳೆಯರಲ್ಲಿ ಉಳಿತಾಯಕ್ಕೆ ಪ್ರೋತ್ಸಾಹ ಸಿಗುತ್ತದೆ.
4. ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗುತ್ತಾರೆ.
5. ಸ್ತ್ರೀಯರಲ್ಲಿ ಶಿಕ್ಷಣ, ಜಾಗೃತಿ ಸಾಧ್ಯವಾಗುತ್ತೆ
6. ಬಾಲ್ಯವಿವಾಹ, ವರದಕ್ಷಿಣೆ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ತಡೆಯಲು ಸಾಧ್ಯವಗುತ್ತದೆ.
7. ಮಾನವ ಹಕ್ಕುಗಳನ್ನು ಪಡೆಯಲು ಸಾಧ್ಯ
8. ಮಹಿಳೆಯರು ಅಭಿವೃದ್ಧಿ ಯೋಜನೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯ.
9. ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

ನಿಮ್ಮ ಆತ್ಮೀಯರಿಗೆ ಹುಟ್ಟು ಹಬ್ಬದ ಶುಭಾಶಯಗಳು,
ಸಾಧಕರಿಗೆ ಅಭಿನಂದನೆಗಳು, ಸ್ಮರಣೆ ಜಾಹೀರಾತು ನೀಡಲು
ಸಂಪರ್ಕಿಸಿ: ಮೊ: 9448633038
Ads Starts from Rs.1000/-

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**01–12–2024 – ಭಾನುವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ಸುಕರ್ಮ |
| ಕರಣ | : ನಾಗವ |
| ಸೂರ್ಯೋದಯ | : 06:52:51 |
| ಸೂರ್ಯಾಸ್ತ | : 17:39:18 |
| ರಾಹು ಕಾಲ | : 16:19–17:39 |
| ಯಮಘಂಡ ಕಾಲ | : 12:16–13:37 |
| ಗುಳಿಕ ಕಾಲ | : 14:58–16:19 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 30–11–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.87 ಅಡಿ |
| ಒಳ ಹರಿವು | 2860 ಕ್ಯುಸೆಕ್ |
| ಹೊರ ಹರಿವು | 6441 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 93.575 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1593.28 ಅಡಿ |
| ಒಳ ಹರಿವು | 589 ಕ್ಯುಸೆಕ್ |
| ಹೊರ ಹರಿವು | 5155 ಕ್ಯುಸೆಕ್ |
| ಸಾಮರ್ಥ್ಯ | 13.989 ಟಿಎಂಸಿ |

# ಡಿ.13 ಸಿರಿಧಾನ್ಯ ಖಾದ್ಯಗಳ ಪಾಕ ಸ್ಪರ್ಧೆ

## ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ

## ಕೃಷಿ ಇಲಾಖೆಯಿಂದ ಜಿಲ್ಲಾ ಮಟ್ಟದ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಅಂಗವಾಗಿ ಕೃಷಿ ಇಲಾಖೆಯಿಂದ ಜಿಲ್ಲಾ ಮಟ್ಟದ ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಡಿಸೆಂಬರ್ 13 ರಂದು ಬೆಳಿಗ್ಗೆ 10 ಗಂಟೆಗೆ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

**ಸಿರಿಧಾನ್ಯ ಖಾದ್ಯಗಳು:** ಸಿರಿಧಾನ್ಯಗಳಾದ ಜೋಳ, ರಾಗಿ, ನವಣೆ, ಸಜ್ಜೆ, ಹಾರಕ, ಬರಗು ಮತ್ತು ಸಾಮೆ ಬೆಳೆಗಳಿಂದ ಸಿಹಿ ಮತ್ತು ಖಾರ ಖಾದ್ಯಗಳನ್ನು ತಯಾರಿಸಬಹುದು.

**ಮರೆತು ಹೋದ ಖಾದ್ಯಗಳು:** ಬಳಕೆಯಾಗದ ಬೆಳೆಗಳು, ಮರೆತು ಹೋದ ಆಹಾರಗಳು, ಸಿರಿಧಾನ್ಯ ಹೊರತುಪಡಿಸಿ ಇತರೆ ದೇಸಿ ತಳಿಗಳಡಿ ಬರುವ ಆಹಾರ ಮತ್ತು ಎಣ್ಣೆಕಾಳು ಬೆಳೆಗಳು, ತರಕಾರಿ ಮತ್ತು ಹಣ್ಣುಗಳ ಇತ್ಯಾದಿ ಖಾದ್ಯಗಳನ್ನು ತಯಾರಿಸಬಹುದು.

ಪ್ರತಿ ಸ್ಪರ್ಧಿಗೆ ಒಂದೇ ತಿನಿಸು ಅಥವಾ ಖಾದ್ಯ ಮಾಡಲು ಅವಕಾಶವಿದ್ದು, ಜಿಲ್ಲೆಯ ಎಲ್ಲಾ ಸಾರ್ವಜನಿಕರು ಭಾಗವಹಿಸಬಹುದಾಗಿದೆ. ವಿದ್ಯಾರ್ಥಿಗಳು, ಕೃಷಿ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಭಾಗವಹಿಸಲು ಅವಕಾಶ



ವಿರುವುದಿಲ್ಲ. ಹಿಂದಿನ ಸಾಲಿನಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯ ಮಟ್ಟದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದ ಸ್ಪರ್ಧಿಗಳಿಗೆ ಪ್ರಸ್ತುತ ವರ್ಷದಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಆದರೆ, ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ಸ್ಪರ್ಧೆಯಲ್ಲಿ ಮನೆಯಲ್ಲಿಯೇ ತಯಾರಿಸಿದ ಸಿರಿಧಾನ್ಯ, ಖಾದ್ಯದ ತಿನಿಸು ಪ್ರದರ್ಶಿಸಲು ಅವಕಾಶವಿದ್ದು, ಅದಕ್ಕೆ ಬಳಸುವ ಸಾಮಾಗ್ರಿಗಳ ಮಾದರಿಗಳನ್ನು ಕಡ್ಡಾಯವಾಗಿ ಪ್ರದರ್ಶಿಬೇಕು. ತಯಾರಿಸಿದ ತಿನಿಸುಗಳ ಪ್ರದರ್ಶನಕ್ಕೆ ಬಳಸಿದ ಸಾಮಗ್ರಿಗಳು, ತೋರಿಕೆ, ರುಚಿ, ಸುವಾಸನೆ ಮತ್ತು ಪೌಷ್ಠಿಕತೆಯ ಆಧಾರದ ಮೇಲೆ ಅಂತಿಮ ತೀರ್ಪು ಕೈಗೊಳ್ಳಲಾಗುವುದು.

ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಒಂದು ಸಿಹಿ, ಖಾರ (ಸಿರಿಧಾನ್ಯ ಖಾದ್ಯಗಳಿಗೆ ಮಾತ್ರ) ಖಾದ್ಯದ ತಿನಿಸನ್ನು ಆಯ್ಕೆ ಮಾಡಲಾಗುವುದು. ಸ್ಪರ್ಧಿಗಳು ನಿಗದಿ ಪಡಿಸಿದ ಸ್ಥಳದಲ್ಲಿ ಸರಿಯಾದ ಸಮಯಕ್ಕೆ ತಮ್ಮ ಅಡುಗೆ ಸಾಮಾಗ್ರಿಗಳೊಂದಿಗೆ ಹಾಜರಿರಬೇಕು.

ಜಿಲ್ಲಾ ಮಟ್ಟಕ್ಕೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಸಿಹಿ, ಖಾರ (ಸಿರಿಧಾನ್ಯ ಖಾದ್ಯಗಳಿಗೆ ಮಾತ್ರ) ಮತ್ತು ಮರೆತು ಹೋದ ಖಾದ್ಯಗಳ ತಿನಿಸಿಗೆ ತಲಾ ರೂ. 5000, 3000 ಹಾಗೂ 2000 ಗಳನ್ನು ನೀಡಲಾಗುವುದು.

ನೊಂದಾಣಿಗಾಗಿ ಮೊ: 8884007388, 7899537999, 8277929661 ಗೆ ಸಂಪರ್ಕಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಬಿ. ಮುದಗಲ್ ತಿಳಿಸಿದ್ದಾರೆ.

## ಆನಂದ ಬಾಣ




# ಗ್ಯಾರಂಟಿ ಯೋಜನೆಗಳು ಸಮಾಜದ ಕಟ್ಟಕಡೆ ವ್ಯಕ್ತಿಗಳಿಗೂ ತಲುಪಬೇಕು

## ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ ಸೂಚನೆ

■ **ಹಂಪಿ ಟೈಮ್ಸ್ ಕೊಪ್ಪಳ**

ರಾಜ್ಯ ಸರ್ಕಾರದ ಮಹತ್ವಕಾಂಕ್ಷೆ ಕಾರ್ಯಕ್ರಮಗಳಾದ ಪಂಚ ಗ್ಯಾರಂಟಿ ಯೋಜನೆಗಳು ಸಮಾಜದ ಕಟ್ಟಕಡೆ ವ್ಯಕ್ತಿಗಳಿಗೂ ತಲುಪಬೇಕು ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎಂ.ರೇವಣ್ಣ ಹೇಳಿದರು.

ಅವರು ಶನಿವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಜನ ಸಾಮಾನ್ಯರ ಏಳಿಗೆಗಾಗಿ ರಾಜ್ಯ ಸರ್ಕಾರವು ಜಾರಿಗೆ ತಂದ ಗೃಹಲಕ್ಷ್ಮಿ ಯೋಜನೆ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಹಾಗೂ ಯುವನಿಧಿ ಯೋಜನೆ ಒಳಗೊಂಡ ಪಂಚ ಗ್ಯಾರಂಟಿ ಯೋಜನೆಗಳು ಜನಪರ ಕಾರ್ಯಕ್ರಮಗಳಾಗಿದ್ದು, ಬಡ ಮತ್ತು ಮಾಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಸಬಲೀಕರಣಕ್ಕೆ ತುಂಬಾ ಸಹಕಾರಿಯಾಗಿದೆ. ಯಾವುದೇ ಮಧ್ಯವರ್ತಿಗಳಿಲ್ಲದೇ ರಾಜ್ಯ ಶೇ.98ರಷ್ಟು ಜನರಿಗೆ ನೇರವಾಗಿ ಐದು ಗ್ಯಾರಂಟಿ ಯೋಜನೆಗಳ ಲಾಭ ಸಿಗುತ್ತಿದೆ. ರಾಜ್ಯ ಸರ್ಕಾರದ ಸಾಮಾಜಿಕ ಪರಿವರ್ತನೆಯ ಕಾರ್ಯಕ್ರಮಗಳಿಂದ ಮಹಿಳೆಯರ ಸಬಲೀಕರಣಕ್ಕೆ ಅನುಕೂಲವಾಗಿದೆ ಎಂದರು.

ಗೃಹಲಕ್ಷ್ಮಿ ಯೋಜನೆ ಯೋಜನೆಯಡಿ ರಾಜ್ಯದ 1.22 ಕೋಟಿ ಕುಟುಂಬದ ಮನೆ ಯಜಮಾನಿಯರಿಗೆ ಮಾಸಿಕ ರೂ. 2 ಸಾವಿರದಂತೆ ಒಟ್ಟು 32,645 ಕೋಟಿ ರೂ.ಗಳನ್ನು ನೀಡಲಾಗಿದೆ. ಗೃಹಜ್ಯೋತಿ ಯೋಜನೆಯಡಿ 1.61 ಕೋಟಿ ವಿದ್ಯುತ್ ಗ್ರಾಹಕರಿಗೆ 200 ಯುನಿಟ್ ಉಚಿತ ವಿದ್ಯುತ್ ಸೌಲಭ್ಯ ದೊರೆತಿದ್ದು, 11031 ಕೋಟಿ ರೂ.ಗಳನ್ನು ಈ ಯೋಜನೆಗೆ ವ್ಯಯ ಮಾಡಲಾಗಿದೆ. ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಹೆಚ್ಚುವರಿ ಅಕ್ಕಿಗಾಗಿ 55.47 ಕೋಟಿ ಜನರಿಗೆ 9040 ಕೋಟಿ ರೂ.ಗಳನ್ನು ನೀಡಲಾಗಿದೆ. ಶಕ್ತಿಯೋಜನೆಯಡಿ ಇಲ್ಲಿಯವರೆಗೆ 336.55 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, ಇದಕ್ಕಾಗಿ 8142 ಕೋಟಿ ರೂ.ಗಳ ವೆಚ್ಚವಾಗಿದೆ. ಯುವನಿಧಿ ಯೋಜನೆಯಡಿ 1.81 ಕೋಟಿ ವಿದ್ಯಾವಂತ ನಿರುದ್ಯೋಗಿಗಳಿಗೆ 141 ಕೋಟಿ ರೂ.ಗಳ ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆ ನೀಡಲಾಗಿದ್ದು, ಈ ಗ್ಯಾರಂಟಿ ಯೋಜನೆಗಳು ರಾಜ್ಯದ ಜನರ ಮನಗಳನ್ನು ಗೆದ್ದಿವೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದ್ದು, ಸಮಿತಿ ಸದಸ್ಯರು ಜನರ ಮನೆ-ಮನೆಗೆ ಭೇಟಿ ನೀಡಿ ಅವರಿಗೆ ಯೋಜನೆಗಳ ಲಾಭ ಸಿಗುತ್ತಿದೆಯೋ ಅಥವಾ ಇಲ್ಲ ಎಂಬುವುದ ಬಗ್ಗೆ ಪರಿಶೀಲಿಸಬೇಕು. ಇಲಾಖಾ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಲಾಭ ದೊರಕಿಸಿ, ಐದು ಗ್ಯಾರಂಟಿ ಯೋಜನೆಗಳಡಿ ಶೇ.100ರಷ್ಟು ಪ್ರಗತಿ ಸಾಧಿಸಲು ಶ್ರಮಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಉಪಾಧ್ಯಕ್ಷರಾದ ಎಸ್.ಬಿ ಖಾದ್ರಿ, ಅಮರೇಶಪ್ಪ ಎಸ್.ಜಿ., ನಾಗರಜ ಅರಳಿ ಹಾಗೂ ಮರ್ದಾನ ಸಾಬ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ತಾಲ್ಲೂಕಾ ಅಧ್ಯಕ್ಷರು, ಸದಸ್ಯರು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿಜಯನಗರ ಕಾಲುವೆಗಳಿಗೆ ನೀರು ಬಿಡುಗಡೆ ವೇಳಾಪಟ್ಟಿ

**ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ**

ಡಿ.01 ರಿಂದ 15 ರವರೆಗೆ 1500 ಕ್ಯೂಸೆಕ್ಸ್‌ನಂತೆ, ಡಿ.16 ರಿಂದ 31 ರವರೆಗೆ 2000 ಕ್ಯೂಸೆಕ್ಸ್‌ನಂತೆ, 2025ರ ಜ.01 ರಿಂದ 31 ರವರೆಗೆ 3800 ಕ್ಯೂಸೆಕ್ಸ್‌ನಂತೆ, ಫೆ.01 ರಿಂದ 28 ರವರೆಗೆ 3800 ಕ್ಯೂಸೆಕ್ಸ್ ನಂತೆ, ಮಾ.01 ರಿಂದ 31 ರವರೆಗೆ 3800 ಕ್ಯೂಸೆಕ್ಸ್ ನಂತೆ ಮತ್ತು ಕುಡಿಯುವ ನೀರಿಗಾಗಿ ಏ.01 ರಿಂದ 10 ರವರೆಗೆ 1650 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆಯು ಇರುವವರೆಗೆ ಮಾತ್ರ ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

**ಎಡದಂಡೆ ವಿಜಯನಗರ ಕಾಲುವೆ**

2025ರ ಏ.11 ರಿಂದ ಮೇ.10 ರವರೆಗೆ 150 ಕ್ಯೂಸೆಕ್ಸ್‌ನಂತೆ ವಿತರಣಾ ಕಾಲುವೆ 1 ರಿಂದ 11ಎ ವರೆಗೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆ ಯು ಇರುವವರೆಗೆ ಮಾತ್ರ ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

**ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆ**

ಡಿ.01 ರಿಂದ 10 ರವರೆಗೆ ನೀರು ನಿಲುಗಡೆ, ಡಿ.11 ರಿಂದ 31 ರವರೆಗೆ 800 ಕ್ಯೂಸೆಕ್ಸ್‌ನಂತೆ, 2025ರ ಜ.01 ರಿಂದ 10 ರವರೆಗೆ ನೀರು ನಿಲುಗಡೆ ಮತ್ತು ಜ.11 ರಿಂದ 31 ರವರೆಗೆ 800 ಕ್ಯೂಸೆಕ್ಸ್ ನಂತೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆಯು ಇರುವವರೆಗೆ ಮಾತ್ರ ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

**ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ**

ಡಿ.01 ರಿಂದ 15 ರವರೆಗೆ 400 ಕ್ಯೂಸೆಕ್ಸ್‌ನಂತೆ, ಡಿ.16 ರಿಂದ 31 ರವರೆಗೆ 600 ಕ್ಯೂಸೆಕ್ಸ್‌ನಂತೆ, 2025ರ ಜ.01 ರಿಂದ 31 ರವರೆಗೆ 650 ಕ್ಯೂಸೆಕ್ಸ್‌ನಂತೆ, ಫೆ.01 ರಿಂದ 28 ರವರೆಗೆ 650 ಕ್ಯೂಸೆಕ್ಸ್‌ನಂತೆ ಮತ್ತು ಮಾ.01 ರಿಂದ 31 ರವರೆಗೆ 700 ಕ್ಯೂಸೆಕ್ಸ್‌ನಂತೆ ಮತ್ತು ಕುಡಿಯುವ ನೀರಿಗಾಗಿ ಏ.01 ರಿಂದ ಮೇ.31 ರವರೆಗೆ 100 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆಯು ಇರುವವರೆಗೆ ಮಾತ್ರ ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

**ರಾಯ ಬಸವಣ್ಣ ಕಾಲುವೆ**

ಡಿ.10 ರಿಂದ 2025ರ ಜ.10 ರವರೆಗೆ ನೀರು ನಿಲುಗಡೆ ಮತ್ತು 2025ರ ಜ.11 ರಿಂದ ಮೇ 31 ರವರೆಗೆ 250 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆಯು ಇರುವವರೆಗೆ ಮಾತ್ರ ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

**ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆ**

ಡಿ.01 ರಿಂದ 25 ಕ್ಯೂಸೆಕ್ಸ್‌ನಂತೆ ಅಥವಾ ಜಲಾಶಯದ ನೀರಿನ ಮಟ್ಟ 1585 ಅಡಿಗಳವರೆಗೆ ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

# ನಾವೆಲ್ಲರೂ ಮಾತೃ ಭಾಷೆಯಲ್ಲಿ ಮಾತನಾಡಬೇಕು : ಬಸವರಾಜ ರಾಯರೆಡ್ಡಿ

**ಮೊದಲ ಪುಟದಿಂದ**

ವಿಶ್ವವಿದ್ಯಾಲಯಗಳು ಮಾತೃಭಾಷೆಯಲ್ಲಿಯೆ ಪಠ್ಯಕ್ರಮಗಳನ್ನು ರಚಿಸಿ ಮಕ್ಕಳಿಗೆ ಕಲಿಸುವಂತಾಗಬೇಕು ಮತ್ತು ಈ ಕುರಿತು ವಿಶ್ವವಿದ್ಯಾಲಯಗಳು ಗಂಭೀರ ಚಿಂತನೆ ಮಾಡಬೇಕಿದೆ ಎಂದು ಹೇಳಿದರು.

ಕನ್ನಡಕ್ಕೆ ಹರಪ್ಪಾ ಮತ್ತು ಮೊಹೆಂಜೊದಾರೋ ಸಂಸ್ಕೃತಿ ಕಾಲದಿಂದ ಹಿಡಿದು ಇತಿಹಾಸ ಇದೆ. ರಾಜ ಮಹಾರಾಜರು ಕನ್ನಡ ಭಾಷೆಯನ್ನು ತಮ್ಮ ಆಡಳಿತ ಭಾಷೆಯಾಗಿ ಆಳ್ವಿಕೆ ಮಾಡಿದ್ದಾರೆ. ಅಶೋಕನ ಹೆಸರು ಗೊತ್ತಾಗಿರುವುದು ಮಸ್ಕಿ ಶಾಸನದಿಂದ ಸನ್ನತಿಯಲ್ಲಿಯೂ ಅಶೋಕನ ಕುರಿತು ಮಾಹಿತಿ ದೊರೆಯುತ್ತದೆ. ಕದಂಬ, ಗಂಗರು, ಚಾಲುಕ್ಯ ಸೇರಿದಂತೆ ಹಲವಾರು ರಾಜ ಮನೆತನಗಳು ನಮ್ಮಲ್ಲಿ ಆಳ್ವಿಕೆ ಮಾಡಿವೆ ಎಂದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಮೇಲೆ ಭಾಷಾವಾರು ಪ್ರಾಂತ್ಯಗಳು ರಚನೆಯಾದವು. ಕರ್ನಾಟಕದ ಏಕೀಕರಣಕ್ಕಾಗಿ ಅಂದು ದೊಡ್ಡ ಚಳುವಳಿ, ಹೋರಾಟಗಳು ನಡೆದವು ಹಲವಾರು ಜನರು ಜೈಲಿಗೆ ಹೋಗಿದ್ದರು. ಅವರ ತ್ಯಾಗ ಬಲಿದಾಗಳನ್ನು ನಾವು ಸ್ಮರಿಸಬೇಕಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎಂ. ರೇವಣ್ಣ ಅವರು ಕಲ್ಯಾಣವಾಣಿ ಸುವರ್ಣ ಸಂಭ್ರಮ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿ, ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಉತ್ತಮ ವಿಶ್ವವಿದ್ಯಾಲಯ ಆಗಲಿ. ಇದರಿಂದ ಈ ಭಾಗದಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ನಡೆಯಲಿ. ಉತ್ತರ ಕರ್ನಾಟಕದ ಜನರು ಕನ್ನಡ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಬಂದ ಶ್ರೇಷ್ಠ ಭಾಷೆ ನಮ್ಮದಾಗಿದೆ. ನಾವೆಲ್ಲರೂ ಮಾತೃಭಾಷೆಗೆ ಆದ್ಯತೆ ನೀಡಬೇಕೆಂದು ಹೇಳಿದರು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಮಾತನಾಡಿ ಕರ್ನಾಟಕ ಇತಿಹಾಸ ಪ್ರಸಿದ್ಧವಾದ ನಾಡಾಗಿದೆ. ಬಸವಣ್ಣನವರು ಜಗತ್ತಿಗೆ ಮೊದಲ ಸಂಸತ್ತನ್ನು ನೀಡಿದ್ದರು. ಇದು ಎಲ್ಲರಿಗೂ ಸಮಾನತೆಯನ್ನು ಸಾರಿದ ನಾಡು ನಮ್ಮದಾಗಿದೆ. ಪಾರ್ಲಿಮೆಂಟನಲ್ಲಿ ವಿವಿಧ ರಾಜ್ಯಗಳಿಂದ ಬಂದವರು ತಮ್ಮದೆ ಭಾಷೆಯಲ್ಲಿ ಮಾತನಾಡುವ ಮೂಲಕ ತಮ್ಮ ಮಾತೃಭಾಷೆ ಬಗ್ಗೆ ಅಭಿಮಾನವನ್ನು ಅವರು ತೋರಿಸುತ್ತಾರೆ ಎಂದು ಹೇಳಿದರು.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೋ. ಬಿ.ಕೆ. ರವಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಈ ಭಾಗದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಾಂಸ್ಕೃತಿಯ ಮೇಲೆ ಪ್ರೀತಿ ಇರುವ ಅಪಾರ ಜನರು ಈ ಭಾಗದಲ್ಲಿದ್ದಾರೆ. ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಅನೇಕ ಕೋರ್ಸುಗಳನ್ನು ಆರಂಭಿಸುತ್ತಿದ್ದೇವೆ. ಎಂದು ಹೇಳಿದರು.

ಕೊಪ್ಪಳ ವಿಶ್ವವಿದ್ಯಾಲಯದ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

# ಶಿಕ್ಷಣ ಉದ್ಯೋಗದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಿ

## ಭಾಗೀರಥಿ ಕಾಲೇಜ್ ಪ್ರಾಚಾರ್ಯರು ನಿರ್ಮಲ ಶಿವನಗುತ್ತಿ ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು.**

ಕನ್ನಡ ಭಾಷೆ ಅತ್ಯಂತ ಪ್ರಾಚೀನ ಹಾಗೂ ವೈಶಿಷ್ಟತೆ ಹೊಂದಿದ ಭಾಷೆ, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಶ್ರೀಮಂತ ಭಾಷೆಯಾಗಿದೆ ಎಂದು ಭಾಗೀರಥಿ ಕಾಲೇಜ್ ಪ್ರಾಚಾರ್ಯರು ನಿರ್ಮಲ ಶಿವನಗುತ್ತಿ ಹೇಳಿದರು.

ಪಟ್ಟಣದ ತುಂಗಭದ್ರ ಕಾಲೇಜ್ ಆವರಣದಲ್ಲಿ ಶನಿವಾರ ತಾಲೂಕು ಅನುದಾನರಹಿತ ಶಾಲಾ-ಕಾಲೇಜಗಳ ಒಕ್ಕೂಟ ಆಯೋಜಿಸಿದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶ್ರೀಮಂತ ಭಾಷೆ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು. ಪ್ರಸ್ತುತ ಕನ್ನಡ ಭಾಷೆಯ ಉಳಿವಿಗಾಗಿ ಹೋರಾಟ ಮಾಡುವಂತಹ ದುಸ್ಥಿತಿ ನಿರ್ಮಾಣವಾಗಿರುವುದು ವಿಷಾಧಕರ.

ಕರ್ನಾಟಕಕ್ಕೆ ದುಡಿಮೆಗಾಗಿ ಬಂದವರೆಲ್ಲಾ ಕಡ್ಡಾಯವಾಗಿ ಕನ್ನಡ ಕಲಿಯಬೇಕು, ವ್ಯವಹರಿಸುವಾಗ ನಾವೂ ಕೂಡಾ ಕನ್ನಡದಲ್ಲಿಯೇ ಮಾತನಾಡಿದಾಗ ಅವರು ಕೂಡಾ ಕನ್ನಡ ಕಲಿಯಲು ಸಾಧ್ಯವಾಗುತ್ತೆ ಎಂದು ತಿಳಿಸಿ.

ಕನ್ನಡ ನಾಡಿಗೆ ಆದಿ ಕವಿ ಪಂಪರಿಂದ ಹಿಡಿದು ಇಲ್ಲಿನ ಕವಿಗಳವರೆಗೆ ದೊಡ್ಡ ಕೊಡುಗೆಯೇ ಇದೆ. ಕನ್ನಡ ನಾಡು ಕುರಿತು ಅನೇಕ ಶಾಸನಗಳೂ ಇವೆ. ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆಯುತ್ತಿರುವ ನಾವೆಲ್ಲಾ ಇದಕ್ಕಾಗಿ ಹೆಮ್ಮೆ ಪಡಬೇಕು. ಕನ್ನಡ ಅನ್ನದ ಹಾಗೂ ಹೃದಯದ ಭಾಷೆಯಾಗಿ ಎಂದಿದಿಗೂ ಉಜ್ವಲವಾಗಿರುವಂತಾಗಲು ನಾವೆಲ್ಲಾ ಶ್ರಮಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ತುಂಗಭದ್ರ ಶಿಕ್ಷಣ ಸಂಸ್ಥೆ ಖಜಾಂಚಿ ಎಂ.ಶಿವಣ್ಣ ಮಾತನಾಡಿ, ಕನ್ನಡ ರಾಜ್ಯೋತ್ಸವ ಕೇವಲ ಆಚರಣೆಗೆ ಸೀಮಿತವಾಗದೇ, ಅದರ ವಿಸ್ಕೃತ ಪರಿಚಯ ಮಾಡುವ ಉತ್ಸವವಾಗಬೇಕು. ಮಕ್ಕಳಲ್ಲಿ ಕನ್ನಡ ಪ್ರಜ್ಞೆ ಸಂಸ್ಕೃತಿಯನ್ನು ಬೆಳೆಸುವಲ್ಲಿ ಶಿಕ್ಷಕರು ಮಹತ್ತರ ಪಾತ್ರ ವಹಿಸಬೇಕು. ಕನ್ನಡ ಭಾಷೆಯಲ್ಲಿ ಎಲ್ಲರೂ ವ್ಯವಹರಿಸುವಂತಾಗಬೇಕು. ಅಗ ಮಾತ್ರ ನಮ್ಮ ಕನ್ನಡತನ ಎಂದಿಗೂ ಅಮರವಾಗಿರುತ್ತದೆ ಎಂದರು.

ಇಂದು ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಎನ್.ವೀರಭದ್ರಪ್ಪ ಪ್ರಾಸ್ತಾವಿಕ ಮಾತನಾಡಿದರು. ನಾನಾ ಶಿಕ್ಷಣ ಸಂಸ್ಥೆ ಮುಖ್ಯಸ್ಥರಾದ ಪಿ.ಶ್ರೀಧರಶೆಟ್ಟಿ, ಪಂಪಾಪತಿ ಬಸಾಪುರ, ಬಿ.ಎಸ್.ಕೊಟ್ರೇಶ್, ಎ. ಮಹಾಂತೇಶ್, ಎಂಎಂಜೆ ಶೋಭಿತ್, ರಾಂಪುರ ವಿವೇಕಾನಂದ, ಕಸಾಪ ತಾಲೂಕು ಅಧ್ಯಕ್ಷ ದೇವರಮನಿ ಕೊಟ್ರೇಶ, ವಿಜಯಲಕ್ಷ್ಮೀ, ಖಾಜಾ ಭಾಷ, ಹಸನ್, ಜೆ.ಹರ್ಷವರ್ದನ ಇತರರು ಇದ್ದರು. ಅರವಿಂದ ಬಸಾಪುರ ನಿರ್ವಹಿಸಿದರು. ನಂತರ ವಿವಿಧ ಶಾಲೆ ವಿದ್ಯಾರ್ಥಿಗಳು ಕನ್ನಡ ಪರವಾದ ಹಾಡುಗಳಿಗೆ ನೃತ್ಯ ಪ್ರದರ್ಶಿಸಿದರು.




# ಮೃತ ಬಾಣಂತಿ ಕುಟುಂಬಕ್ಕೆ ಶಾಸಕ ಡಾ||ಶ್ರೀನಿವಾಸ್ ಸಾಂತ್ವನ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಬಳ್ಳಾರಿಯ ಬೀಮ್ಸ್ ಆಸ್ಪತ್ರೆಯಲ್ಲಿ ಬಾಣಂತಿಯರ ಸರಣಿ ಸಾವುಗಳು ಐದಕ್ಕೆ ಏರಿಕೆಯಾಗಿದೆ. ಚಿಕಿತ್ಸೆ ಫಲಕಾರಿಯಾಗದೆ ಕೂಡ್ಲಿಗಿ ತಾಲೂಕಿನ ಚಂದ್ರಶೇಖರಪುರ ಗ್ರಾಮದ ಮಹಾಲಕ್ಷ್ಮಿ (20) ಎಂಬ ಮಹಿಳೆ ಸಾವನ್ನಪ್ಪಿರುತ್ತಾರೆ.

ಈ ಘಟನೆ ಹಿನ್ನೆಲೆಯಲ್ಲಿ ಆಸ್ಪತ್ರೆಗಳ ವಿರುದ್ಧ ಕುಟುಂಬಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಈ ಹಿನ್ನಲೆಯಲ್ಲಿ ಮೃತ ಬಾಣಂತಿ ಮಹಾಲಕ್ಷ್ಮಿ ಅವರ ಮನೆಗೆ ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಶುಕ್ರವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೃತ ಮಹಾಲಕ್ಷ್ಮಿ ಮಗುವಿನ ಜೀವನಕ್ಕೆ ಬೇಕಾಗುವ ಆರ್ಥಿಕ ವ್ಯವಸ್ಥೆ ನೀಡುವುದಾಗಿ ಭರವಸೆ ನೀಡಿದರು.ಸಾರ್ವಜನಿಕರು ಯಾವುದೇ ಕಾರಣಕ್ಕೂ ಹೆರಿಗೆಗಳನ್ನು ಮನೆಯಲ್ಲಿ ಮಾಡಿಸಬಾರದು. ಕೂಡಲೆ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ತೆರಳಿ ವೈದ್ಯರ ಸಲಹೆ ಸೂಚನೆಗಳನ್ನು ಪಾಲಿಸಿ ಹೆರಿಗೆಗಳನ್ನು ಮಾಡಿಸಬೇಕು. ಗರ್ಭಿಣಿಯರಿಗೆ ಮಾನಸಿಕವಾಗಿ ಧೈರ್ಯ ತುಂಬಬೇಕು. ಈ ರೀತಿಯ ವೈದ್ಯರ ಸಲಹೆಗಳನ್ನು ಪಡೆದು ಪಾಲಿಸುವುದರಿಂದ ಇಂತಹ ಸಾವು ನೋವುಗಳು ತಡೆಯಬಹುದು ಎಂದು ಹೇಳಿದರು.

ಈ ವೇಳೆ ಚಂದ್ರಶೇಖರಪುರ ಗ್ರಾಮದ ಪ್ರಮುಖ ಮುಖಂಡರು, ಕಾಂಗ್ರೆಸ್ ಮುಖಂಡರು, ಉಪಸ್ಥಿತರಿದ್ದರು.